ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಬುಧವಾರ, ಆಗಸ್ಟ್ 30, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 108 RNI : 27369/75

janathavani@mac.com
www.janathavani.com
☎ 08192 254736 91642 99999



## ಒಟ್ಟಾಗಿ ಮುನ್ನಡೆದರೆ ಬದುಕು ಹಸನು

### ಭಗವಾನ್ ಶ್ರೀ ಜಿವ್ವೇಶ್ವರ ಸ್ವಾಮಿ ಜಯಂತ್ಯುತ್ಸವದಲ್ಲಿ ಸಚಿವ ಕೆ.ಹೆಚ್. ಮುನಿಯಪ್ಪ

ದಾವಣಗೆರೆ, ಆ. 29- ಸಮಾಜ ಒಗ್ಗಟ್ಟಿನಿಂದ ಇದ್ದರೆ ಏನೆಲ್ಲಾ ಸಾಧಿಸಬಹುದು. ಒಗ್ಗಟ್ಟೇ ಮೂಲಮಂತ್ರ. ಗುಂಪುಗಾರಿಕೆ, ಭಿನ್ನಾಭಿಪ್ರಾಯಗಳಿದ್ದರೆ ಅವುಗಳನ್ನೆಲ್ಲಾ ಮರೆತು ಒಟ್ಟಾಗಿ ಸಮಾಜ ಮುನ್ನಡೆಸಿದರೆ ಜನರ ಬದುಕು ಹಸನಾಗುತ್ತದೆ ಎಂದು ಸಚಿವ ಕೆ.ಹೆಚ್. ಮುನಿಯಪ್ಪ ಹೇಳಿದರು.

ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಸ್ವಕುಳಸಾಳಿ ಸಮಾಜ (ನೇಕಾರ)ದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಭಗವಾನ್ ಶ್ರೀ ಜಿವ್ವೇಶ್ವರ ಸ್ವಾಮಿ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ನೂರು ದಿನಗಳಲ್ಲೇ ಕಾಂಗ್ರೆಸ್ ಸರ್ಕಾರ ಚುನಾವಣೆಗೂ ಮುನ್ನ ಭರವಸೆ ನೀಡಿದ್ದ ಐದು ಗ್ಯಾರಂಟಿಗಳ ಪೈಕಿ ಮೂರು ಗ್ಯಾರಂಟಿಗಳು ಅನುಷ್ಠಾನಗೊಂಡಿದ್ದು, ನಾಳೆ ಮೈಸೂರಿನಲ್ಲಿ 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ದೊರೆಯಲಿದೆ. ಡಿಸೆಂಬರ್ ವೇಳೆಗೆ ಐದನೇ 'ಯುವ ನಿಧಿ' ಯೋಜನೆ ಜಾರಿಗೊಳ್ಳಲಿದೆ. ಕಾಂಗ್ರೆಸ್ ನುಡಿದಂತೆ ನಡೆವ ಸರ್ಕಾರವಾಗಿದೆ. ಕೊಟ್ಟ ಭರವಸೆಯನ್ನು ಈಡೇರಿಸುತ್ತಿದೆ ಎಂದರು.

ಮಾಜಿ ಸಂಸದ ಕೆ.ಸಿ. ಕೊಂಡಯ್ಯ ಅವರು ನೇಕಾರ ಸಮಾಜಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಲು ಪಣ ತೊಟ್ಟಿದ್ದಾರೆ. ಸಮಾಜಕ್ಕೆ ಅಗತ್ಯವಾದ ಬೇಡಿಕೆಗಳ ಈಡೇರಿಕೆಗಾಗಿ ಸಂಘಟಿತರಾಗಬೇಕು ಎಂದು ಸಚಿವರು ನೇಕಾರ ಸಮಾಜಕ್ಕೆ ಕರೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾತನಾಡಿ, ನಮ್ಮ ಸರ್ಕಾರ ಶಿಕ್ಷಣ, ಆರೋಗ್ಯ ಮತ್ತು ಹಸಿವು ನೀಗಿಸುವ ಯೋಜನೆಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದೆ. ಕೊಟ್ಟ ಮಾತಿನಂತೆ ಐದು (2ನೇ ಪುಟಕ್ಕೆ)

## ಅಡುಗೆ ಅನಿಲ ಬೆಲೆ 200 ಇಳಿಕೆ

### ಮಧ್ಯಪ್ರದೇಶ, ರಾಜಸ್ಥಾನ ವಿಧಾನಸಭಾ ಚುನಾವಣೆಗಳ ಬೆನ್ನಲ್ಲೇ ಕೇಂದ್ರದ ಕ್ರಮ

ನವದೆಹಲಿ, ಆ. 29- ಅಡುಗೆ ಅನಿಲ ಬೆಲೆಯನ್ನು 200 ರೂ. ಇಳಿಸುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದೆ. ಪ್ರಸಕ್ತ ರಾಜಧಾನಿ ದೆಹಲಿಯಲ್ಲಿ ಅಡುಗೆ ಅನಿಲದ ಬೆಲೆ ಸಿಲಿಂಡರ್‌ಗೆ 1,103 ರೂ. ಆಗಿದೆ. ಬುಧವಾರದಿಂದ ದರ ಸಿಲಿಂಡರ್‌ಗೆ 903 ರೂ. ಆಗಿರಲಿದೆ. ಉಜ್ವಲ ಫಲಾನುಭವಿಗಳಿಗೆ ಅಡುಗೆ ಅನಿಲದ ದರ ಪ್ರತಿ ಸಿಲಿಂಡರ್‌ಗೆ 703 ರೂ. ಆಗಿರಲಿದೆ.

ಈ ವಿಷಯ ತಿಳಿಸಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ಜನ ಸಾಮಾನ್ಯರಿಗೆ ನೆರವು ನೀಡಲು ಇಳಿಕೆ ಮಾಡಲಾಗಿದೆ ಎಂದಿದ್ದಾರೆ. ಅಲ್ಲದೇ ಸರ್ಕಾರ ಹೆಚ್ಚುವರಿಯಾಗಿ 75 ಲಕ್ಷ ಉಜ್ವಲ ಸಂಪರ್ಕ ಒದಗಿಸಲಿದೆ. ಇದರಿಂದಾಗಿ ಉಜ್ವಲ ಯೋಜನೆಯ



ಫಲಾನುಭವಿಗಳ ಸಂಖ್ಯೆ 10.35 ಕೋಟಿಗೆ ತಲುಪಲಿದೆ. ಕಳೆದ ಒಂದೆರಡು ವರ್ಷಗಳಲ್ಲಿ ಅಡುಗೆ ಅನಿಲದ ಬೆಲೆ ತೀವ್ರ ಏರಿಕೆ ಯಾಗಿದೆ. ಇದು ಚುನಾವಣಾ ವಿಷ ಯವೂ ಆಗಿತ್ತು. ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೂ ಕಾಂಗ್ರೆಸ್ ಈ ವಿಷಯವನ್ನು ಪ್ರಮುಖ ವಾಗಿ ಪ್ರಸ್ತಾಪಿಸಿತ್ತು. ಮಧ್ಯಪ್ರದೇಶ, ರಾಜಸ್ಥಾನ ಮತ್ತಿತರೆ ರಾಜ್ಯಗಳ ಚುನಾವಣೆಗಳು ಹತ್ತಿರದಲ್ಲಿರು ವಾಗಲೇ ಕೇಂದ್ರ ಸರ್ಕಾರ ಅಡುಗೆ ಅನಿಲದ ಬೆಲೆ ಇಳಿಕೆಯ ನಿರ್ಧಾರ ತೆಗೆದುಕೊಂಡಿದೆ. ಆದರೆ, ಬೆಲೆ ಇಳಿಕೆಗೂ ಚುನಾವಣೆಗೂ ಸಂಬಂಧ ಇಲ್ಲ. ಓಣಂ ಹಾಗೂ ರಕ್ಷಾ ಬಂಧನದ ಈ ಸಂದ ರ್ಭದಲ್ಲಿ ಮೋದಿ ಸರ್ಕಾರ ಮಹಿಳೆಯರಿಗೆ ಕೊಡುಗೆ ನೀಡಿದೆ ಎಂದು ಸಚಿವ ಠಾಕೂರ್ ಹೇಳಿದ್ದಾರೆ.

ಈ ಇಳಿಕೆಯ ಹೊರೆಯನ್ನು ಯಾವ ರೀತಿ ಭರಿಸಲಾಗುವುದು ಎಂಬುದನ್ನು ಸಚಿವರು ತಿಳಿಸಿಲ್ಲ. ಬೆಲೆ ಇಳಿಕೆಯಿಂದ ಸರ್ಕಾರಿ ಸ್ವಾಮ್ಯದ ಕಂಪನಿಗಳಿಗೆ ಆಗುವ ಹೊರೆಯನ್ನು ಸರ್ಕಾರದಿಂದ ಭರಿಸುವ ಸಾಧ್ಯತೆ ಇದೆ.

ಈ ಇಳಿಕೆಯ ಕಾರಣದಿಂದಾಗಿ ಉಜ್ವಲ ಗ್ರಾಹಕರಿಗೆ ಈ ವರ್ಷದಲ್ಲಿ 7,680 ಕೋಟಿ ರೂ. ಸಬ್ಸಿಡಿ ವೆಚ್ಚವಾಗಲಿದೆ ಎಂದು (5ನೇ ಪುಟಕ್ಕೆ)

## ಜೈಲಿನಲ್ಲಿರುವವರಿಗೂ ಹಕ್ಕುಗಳಿವೆ : ಹೈಕೋರ್ಟ್

ನವದೆಹಲಿ, ಆ. 29- ಜೈಲಿನ ಲ್ಲಿರುವವರಿಗೂ ಮೂಲ ಸಾಂವಿಧಾ ನಿಕ ಹಕ್ಕುಗಳಿವೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ತಿಹಾರ್ ಜೈಲಿನ ಪರಿಸ್ಥಿತಿಯ ಪರಿಶೀಲನೆಗೆ ಸಮಿತಿ ಯೊಂದನ್ನು ರಚಿಸಿದೆ. ತಿಹಾರ್ ಜೈಲಿ ನಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇದೆ ಎಂದು ಆರೋಪಿಸ ಲಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯ, ನಾಲ್ವರು ವಕೀಲರ ಸತ್ಯ ಶೋಧನಾ ಸಮಿತಿಯನ್ನು ರಚಿಸಿದೆ. ಜೈಲಿನಲ್ಲಿರುವವರಿಗೂ ಜೀವಿಸುವ ಹಕ್ಕಿದೆ ಎಂದು ನ್ಯಾಯಾ ಲಯ ತಿಳಿಸಿದೆ. ಜೈಲಿನಲ್ಲಿ ಶೌಚಾ ಲಯ ಹಾಗೂ ಕುಡಿಯುವ ನೀರು ಸೇರಿದಂತೆ, ಮೂಲಭೂತ ಸೌಲಭ್ಯ ಗಳಿಲ್ಲ. ಪರಿಸ್ಥಿತಿ ಕಳವಳಕಾರಿಯಾಗಿದೆ ಎಂದು ವಕೀಲ ಅಮಿತ್ ಜಾರ್ಜ್ ಅವರು ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದರು.




## ಆಗಸ್ಟ್‌ನಲ್ಲಿ 120 ವರ್ಷಗಳಲ್ಲೇ ಕಡಿಮೆ ಮಳೆ

### ಸೆಪ್ಟೆಂಬರ್‌ನಲ್ಲಿ ಪರಿಸ್ಥಿತಿ ಉತ್ತಮವಾಗುವ ನಿರೀಕ್ಷೆ

ನವದೆಹಲಿ, ಆ. 29 – ಎಲ್ ನೀನೋ ಪರಿಣಾಮದ ಕಾರಣದಿಂದಾಗಿ ಭಾರತದಲ್ಲಿ 1901ರ ನಂತರ ಅತ್ಯಂತ ಒಣ ಆಗಸ್ಟ್ ಪರಿಸ್ಥಿತಿ ಎದುರಾಗಿದೆ ಎಂದು ಹವಾಮಾನ ಇಲಾಖೆಯ ಹಿರಿಯ ಪರಿಣಿತರು ತಿಳಿಸಿದ್ದಾರೆ.

ಅಲ್ಲದೇ, 2015ರ ನಂತರ ಇದೇ ಮೊದಲ ಬಾರಿಗೆ ಅತಿ ಕಡಿಮೆ ಮಳೆ ದಾಖಲಾಗುವ ಸಾಧ್ಯತೆ ಇದೆ. ಈ ಬಾರಿ ಒಟ್ಟಾರೆ ಮುಂಗಾರು ಕೊರತೆ ಶೇ.13ರಷ್ಟಿರುವ ಸಾಧ್ಯತೆ ಇದೆ.

ಇದುವರೆಗೂ ಆಗಸ್ಟ್ ತಿಂಗಳಲ್ಲಿ ಮಳೆಯ ಕೊರತೆ ಶೇ.32ರಷ್ಟಿದೆ. ಮುಂದಿನ ಮೂರು ದಿನಗಳಲ್ಲೂ ಸಹ ಮಳೆ ಚಟುವಟಿಕೆ ದೇಶಾದ್ಯಂತ ಕಡಿಮೆ ಪ್ರಮಾಣದಲ್ಲೇ ಇರಲಿದೆ. ಹೀಗಾಗಿ 1901ರ ನಂತರ ದೇಶದಲ್ಲಿ ತೀವ್ರ ಒಣ ಹವೆಯ ಆಗಸ್ಟ್ ಕಂಡು ಬಂದಿದೆ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಹವಾಮಾನ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಆಗಸ್ಟ್ ತಿಂಗಳಲ್ಲಿ 294.9 ಮಿ.ಮೀ. ಮಳೆಯಾಗುತ್ತದೆ. ಇದು ಮುಂಗಾರು ಮಳೆಯ ಒಟ್ಟು ಪ್ರಮಾಣದ (2ನೇ ಪುಟಕ್ಕೆ)




## ಕಾವೇರಿ : 5 ಸಾವಿರ ಕ್ಯೂಸೆಕ್ಸ್ ನೀರು ಹರಿಸಲು ಆದೇಶ

ನವದೆಹಲಿ, ಆ. 29 - 15 ದಿನಗಳ ಕಾಲ ಪ್ರತಿದಿನ 5 ಸಾವಿರ ಕ್ಯೂಸೆಕ್ಸ್ ನೀರು ಹರಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ. ಇದು ರಾಜ್ಯದ ಕಾವೇರಿ ಅಚ್ಚುಕಟ್ಟು ಪ್ರದೇಶಕ್ಕೆ ಸಂಕಷ್ಟ ತಂದಿದೆ. ನೀರು ಹರಿಸಿದಲ್ಲಿ ಕುಡಿ ಯುವ ನೀರಿಗೂ ಸಮಸ್ಯೆಯಾಗುವ ಕಳವಳ ವ್ಯಕ್ತವಾಗಿದೆ.

ತಮಿಳುನಾಡಿಗೆ ನೀರು ಹರಿಸುವ ಸಂಬಂಧ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮಂಗಳವಾರ ದೆಹಲಿಯಲ್ಲಿ ಸಭೆ ನಡೆಸಿತು. ಕರ್ನಾಟಕ ಪರ ಭಾಗಿಯಾಗಿದ್ದ ಎಸಿಎಸ್ ರಾಕೇಶ್ ಸಿಂಗ್, ತಮಿಳುನಾಡಿಗೆ ನೀರು ಹರಿಸಿದರೆ ಕರ್ನಾಟಕಕ್ಕೆ ಕುಡಿಯುವ (2ನೇ ಪುಟಕ್ಕೆ)

## ವಾಯು ಮಾಲಿನ್ಯದಿಂದ ದೆಹಲಿಯಲ್ಲಿ 11.9 ವರ್ಷ ಆಯಸ್ಸು ಕಡಿತ

ನವದೆಹಲಿ, ಆ. 29 – ವಿಶ್ವದ ಅತ್ಯಂತ ಮಲಿನ ನಗರ ಎಂಬ ಕುಖ್ಯಾತಿಗೆ ಪಾತ್ರವಾಗಿರುವ ದೆಹಲಿ ಯಲ್ಲಿ ಇರುವ ಜನರು, ತಮ್ಮ ಆಯ ಸ್ಸಿನ 11.9 ವರ್ಷ ಕಳೆದುಕೊಳ್ಳುತ್ತಿ ದ್ದಾರೆ ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ.

ಯುನಿವರ್ಸಿಟಿ ಆಫ್ ಶಿಕಾಗೋದ ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್ ವರದಿಯೊಂ ದನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ, ಭಾರತದಲ್ಲಿ ವಾಯು ಮಾಲಿನ್ಯದ ಕಾರಣದಿಂದಾಗಿ ಜನರು ತಮ್ಮ ಜೀವನದ ಸರಾಸರಿ 5.3 ವರ್ಷಗಳನ್ನು ಕಳೆದುಕೊ ಳ್ಳುತ್ತಿದ್ದಾರೆ. (2ನೇ ಪುಟಕ್ಕೆ)






# ನಾಲೆಯಲ್ಲಿನ ಹೂಳು ತೆಗೆಸುವಂತೆ ಆಗ್ರಹಿಸಿ ರೈತರ ಪ್ರತಿಭಟನೆ

## ಸ್ವಂತ ಖರ್ಚಿನಲ್ಲಿ ನಾಲೆ ಹೂಳು ತೆಗೆಸಲು ಮುಂದಾದ ಹರೀಶ್, ಶ್ರೀನಿವಾಸ್, ದ್ಯಾವಪ್ಪರೆಡ್ಡಿ

ಮಲೇಬೆನ್ನೂರು, ಆ.29- ದೇವರಬೆಳಕೆರೆ ಪಿಕಪ್ ಡ್ಯಾಂನ ಸಿದ್ದವೀರಪ್ಪ ನಾಲೆಯಲ್ಲಿ ತುಂಬಿಕೊಂಡಿರುವ ಹೂಳನ್ನು ತೆಗೆಸುವಂತೆ ನಾಲೆಯ ಕೊನೆ ಭಾಗದ ರೈತರು ಮಂಗಳವಾರ ನಂದಿತಾವರೆ ಬಳಿ ಪ್ರತಿಭಟನೆ ನಡೆಸಿದರು.



**ನಂದಿತಾವರೆ**

ಪಿಕಪ್ ಡ್ಯಾಂನಲ್ಲಿ ಸಾಕಷ್ಟು ನೀರಿದೆ. ಆದರೆ, ನಾಲೆಯಲ್ಲಿ ಹೂಳು ತುಂಬಿಕೊಂಡಿರುವುದರಿಂದ ನಂದಿತಾವರೆ, ಭಾನುವಳ್ಳಿ, ಎಕ್ಕೆಗೊಂದಿ ಗ್ರಾಮಗಳ ವ್ಯಾಪ್ತಿಯ ಜಮೀನುಗಳಿಗೆ ನೀರು ಬರುತ್ತಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದ ತಕ್ಷಣ ಶಾಸಕ ಬಿ.ಪಿ. ಹರೀಶ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪರೆಡ್ಡಿ ಅವರುಗಳು ಒಬ್ಬರ ನಂತರ ಒಬ್ಬರು ಸ್ಥಳಕ್ಕೆ ಆಗಮಿಸಿ ರೈತರ ಸಮಸ್ಯೆ ಆಲಿಸಿದರು.

ಈ ವೇಳೆ ಸ್ಥಳದಲ್ಲಿದ್ದ ಭದ್ರಾ ನಾಲಾ ನಂ-3 ಉಪವಿಭಾಗದ ಎಇಇ ಧನಂಜಯ ಅವರು, ತಕ್ಷಣ ಹೂಳು ತೆಗೆಸಲು ನಮ್ಮ ಬಳಿ ಅನುದಾನ ಇಲ್ಲ ಎಂದು ಕೈ ಚೆಲ್ಲಿದರು.

ಆಗ ಶಾಸಕ ಹರೀಶ್ ಅವರು, ರೈತರಿಗೆ ತೊಂದರೆ ಆಗಿರುವುದನ್ನು ಗಮನಿಸಿ, ಸುಮಾರು 2 ಕಿ.ಮೀ ಉದ್ದ ನಾಲೆಯಲ್ಲಿ ತುಂಬಿಕೊಂಡಿರುವ ಹೂಳು ತೆಗೆಸಲು ಇಟಾಚಿ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ರೈತರೊಂದಿಗೆ ಚರ್ಚಿಸಿದರು.

ಕೊನೆಗೆ ಶಾಸಕ ಹರೀಶ್ ಅವರು 10 ತಾಸು ಇಟಾಚಿಯ ಬಾಡಿಗೆ ಹಣ ನೀಡಲು ಮುಂದಾದರು. ಅದರಂತೆ ನಂದಿಗಾವಿ ಶ್ರೀನಿವಾಸ್, ವೈ.ದ್ಯಾವಪ್ಪರೆಡ್ಡಿ, ಭಾನುವಳ್ಳಿಯ ಬಲ್ಲೂರು ಕೆಂಚಪ್ಪ ಮತ್ತು ಎಇಇ ಧನಂಜಯ ಅವರೂ ತಲಾ 5 ತಾಸು ಇಟಾಚಿಯ ಬಾಡಿಗೆ ಹಣ ನೀಡುವುದಾಗಿ ಹೇಳಿ ಬುಧವಾರ ಮಧ್ಯಾಹ್ನದಿಂದ ಕೆಲಸ ಆರಂಭಿಸುವಂತೆ ರೈತರಿಗೆ ಹೇಳಿದಾಗ, ರೈತರು ಪ್ರತಿಭಟನೆ ಕೈಬಿಟ್ಟು ಹರೀಶ್, ಶ್ರೀನಿವಾಸ್, ದ್ಯಾವಪ್ಪರೆಡ್ಡಿ, ಕೆಂಚಪ್ಪ ಅವರಿಗೆ ಧನ್ಯವಾದ ಹೇಳಿದರು.

ರೈತ ಸಂಘದ ನಂದಿತಾವರೆ ಮುರುಗೇಂದ್ರಯ್ಯ, ಷಡಾಕ್ಷರಿ, ಗದಿಗೆಪ್ಪ, ಹರೀಶ್, ಭಾನುವಳ್ಳಿ ಪ್ರಕಾಶ್, ನಾರಾಯಣಪ್ಪ ಸೇರಿದಂತೆ ನೂರಾರು ರೈತರು ಈ ವೇಳೆ ಹಾಜರಿದ್ದರು.

## ಮಲೇಬೆನ್ನೂರು: ಪ್ರತಿಭಾ ಕಾರಂಜಿಯಲ್ಲಿ ಗಮನ ಸೆಳೆದ ಜಾನಪದ ನೃತ್ಯ



**ಮಲೇಬೆನ್ನೂರು ಸಮೀಪದ ಎಕ್ಕೆಗೊಂದಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಬೆಳ್ಳೂಡಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮದಲ್ಲಿ ಹನಗವಾಡಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿಯರು ನಡೆಸಿಕೊಟ್ಟ ಜಾನಪದ ದೃಶ್ಯ ಎಲ್ಲರ ಗಮನ ಸೆಳೆಯಿತು.**

# ಒಟ್ಟಾಗಿ ಮುನ್ನಡೆದರೆ ಬದುಕು ಹಸನು

**(1ನೇ ಪುಟದಿಂದ)** ಗ್ಯಾರಂಟಿ ಯೋಜನೆಗಳ ಜಾರಿಯನ್ನು ಪ್ರಾಮಾಣಿಕವಾಗಿ ಮಾಡುತ್ತಿದೆ ಎಂದರು.

ಸ್ವಕುಳಸಾಳಿ ಸಮಾಜಕ್ಕೆ ಅತೀ ಕಡಿಮೆ ದರದಲ್ಲಿ ಈಗಾಗಲೇ ನಿವೇಶನವನ್ನು ಮಂಜೂರು ಮಾಡಲಾಗಿದೆ. ಸಮುದಾಯ ಭವನ ನಿರ್ಮಾಣದ ಬೇಡಿಕೆಯನ್ನು ನಮ್ಮ ಮುಂದಿಟ್ಟಿದ್ದು, ಅದನ್ನು ಕೂಡ ಸರ್ಕಾರದ ಮುಂದಿಟ್ಟು ಹೆಚ್ಚಿನ ಅನುದಾನ ಕೊಡಿಸುವುದಾಗಿ ಭರವಸೆ ನೀಡಿದರು.

ಮಾಜಿ ಸಂಸದ ಕೆ.ಸಿ. ಕೊಂಡಯ್ಯ ಮಾತನಾಡಿ, 10- 12 ಉಪ ಪಂಗಡಗಳನ್ನು 'ನೇಕಾರ' ಎಂಬ ಸೂರಿನಡಿಗೆ ತರುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ನೇಕಾರರ ಒಕ್ಕೂಟ ರಚನೆಯಾಗಿದೆ. ರಾಜ್ಯದಲ್ಲಿ ದೇವಾಂಗ, ಕುರುಹಿನಶೆಟ್ಟಿ, ಸ್ವಕುಳಸಾಳಿ ಸೇರಿ ಅನೇಕ ಉಪ ಪಂಗಡಗಳಿವೆ. ಇವುಗಳನ್ನೆಲ್ಲಾ 'ನೇಕಾರ' ಎಂಬ ಹೆಸರಿನ ಮೂಲಕ ಒಂದೇ ಸೂರಿನಡಿ ತರುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು.

ನೇಕಾರಿಕೆ ವೃತ್ತಿ ನೇಪಥ್ಯಕ್ಕೆ ಸರಿಯುತ್ತಿದ್ದು, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಮಾಜ ಒಂದಾಗಬೇಕಾಗಿದೆ ಎಂದರು.

ನಗರದ ಜಡೇಸಿದ್ಧ ಶಿವಯೋಗೇಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸ್ವಕುಳಸಾಳಿ ಸಮಾಜದ ಅಧ್ಯಕ್ಷ ಮೋಹನ್ ಪಿ. ಗಾಯಕವಾಡ್ ಅಧ್ಯಕ್ಷತೆ ವಹಿಸಿದ್ದರು.

ಮೇಯರ್ ವಿನಾಯಕ ಪೈಲ್ವಾನ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶರಾವ್, ದೂಡಾ ಮಾಜಿ ಅಧ್ಯಕ್ಷ ಮಾಲತೇಶರಾವ್ ಜಾಧವ್, ಸ್ವಕುಳಸಾಳಿ ಗುರುಪೀಠದ ಸ್ಥಾಪನಾ ಸಮಿತಿ ಗೌರವಾಧ್ಯಕ್ಷ ನೀಲಕಂಠಪ್ಪ ರೋಖಡೆ, ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಬಸವರಾಜ್ ಗುಬ್ಬಿ, ಜಿಲ್ಲಾ ನೇಕಾರರ ವೇದಿಕೆ ಅಧ್ಯಕ್ಷ ಎಲ್. ಸತ್ಯನಾರಾಯಣ, ನಗರಸಭೆ ಮಾಜಿ ಅಧ್ಯಕ್ಷ ಆರ್. ಹೆಚ್.ನಾಗಭೂಷಣ, ಪಾಲಿಕೆ ಮಾಜಿ ಸದಸ್ಯ ಡಿ.ಎನ್. ಜಗದೀಶ್, ವಾಸುದೇವ್ ಸಾಕ್ರೆ ಮತ್ತಿತರರು ಭಾಗವಹಿಸಿದ್ದರು.

ದೇವಸೇನಿ ಪ್ರಾರ್ಥಿಸಿದರು. ಪ್ರಧಾನ ಕಾರ್ಯದರ್ಶಿ ಧರ್ಮರಾಜ ಏಕಬೋಟೆ ಸ್ವಾಗತಿಸಿದರು. ಆರ್.ಜೆ. ಬಸವರಾಜ್ ನಿರೂಪಿಸಿದರು. ಮಂಜುನಾಥ ಕಾಂಬಳೆ ವಂದಿಸಿದರು.

# ಲೋಕಸಭೆಗೆ ಮಾಜಿ ಪ್ರಧಾನಿ ದೇವೇಗೌಡ ಸ್ಪರ್ಧೆ ಸಾಧ್ಯತೆ



ಬೆಂಗಳೂರು, ಆ.29- ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು 2024ರಲ್ಲಿ ನಡೆಯುವ ಲೋಕಸಭಾ ಚುನಾವಣೆಯಲ್ಲೂ ಕಣಕ್ಕಿಳಿಯುವ ಸಾಧ್ಯತೆ ಇದೆ.

ವಯೋ ಸಹಜ ಆರೋಗ್ಯ ಸಮಸ್ಯೆ ಇದ್ದರೂ ಪಕ್ಷ ಸಂಘಟನೆ ದೃಷ್ಟಿಯಿಂದ 91ನೇ ವಯಸ್ಸಿನ ಗೌಡರು ಮಂಡ್ಯ, ಇಲ್ಲವೇ ಹಾಸನ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ.

ಚುನಾವಣಾ ಕಣಕ್ಕಿಳಿಯಲು ಅವರಿಗೆ ಆಸಕ್ತಿ ಇಲ್ಲದಿದ್ದರೂ ಪುತ್ರ ಹೆಚ್.ಡಿ.ರೇವಣ್ಣ ಅವರು, ಗೌಡರನ್ನು ಕಣಕ್ಕಿಳಿಸಿ ಸಂಸತ್ತಿಗೆ ಕಳುಹಿಸಬೇಕು ಎಂಬ ಪಣ ತೊಟ್ಟಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ತುಮಕೂರಿನಿಂದ ಸ್ಪರ್ಧಿಸಿದ್ದ ಗೌಡರು, ಅಲ್ಪಮತಗಳ ಅಂತರದಿಂದ ಪರಾಭವಗೊಂಡಿದ್ದರು. ಸೋಲಿನ ಸೇಡನ್ನು ತೀರಿಸಿಕೊಳ್ಳಲು ಮತ್ತು ಅವರಿಗೆ ಆಗಿರುವ ನೋವನ್ನು ಅಳಿಸಿ ಹಾಕಲು ಕುಟುಂಬದವರು ಈ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ರೇವಣ್ಣ ಹೊರತುಪಡಿಸಿ ಉಳಿದ ಕುಟುಂಬದ ಸದಸ್ಯರೆಲ್ಲರೂ ಹಾಸನದಿಂದಲೇ ಸ್ಪರ್ಧಿಸಬೇಕು ಎಂಬ ಅಪೇಕ್ಷೆ ಪಟ್ಟಿದ್ದಾರೆ. ಅಲ್ಲಿನ ಪಕ್ಷದ ಶಾಸಕರು ಹಾಗೂ ಕಾರ್ಯಕರ್ತರ ಅಭಿಪ್ರಾಯವೂ ಇದೇ ಆಗಿದೆ.

ಆದರೆ, ರೇವಣ್ಣ ಅವರು ಮಂಡ್ಯದಿಂದ ಕಣಕ್ಕಿಳಿಸುವ ಯೋಚನೆಯಲ್ಲಿದ್ದಾರೆ. ಕಳೆದ ಚುನಾವಣೆಯಲ್ಲಿ ಗೌಡರು ತಮ್ಮ ಮೊಮ್ಮಗನಿಗಾಗಿ ಹಾಸನ ಕ್ಷೇತ್ರವನ್ನು ಬಿಟ್ಟುಕೊಟ್ಟು, ತುಮಕೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿದ್ದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರನ್ನು ಮಂಡ್ಯದಿಂದ ಕಣಕ್ಕಿಳಿಸಬೇಕು ಎಂಬ ಅಭಿಲಾಷೆ ಕುಮಾರಸ್ವಾಮಿ ಅವರಲ್ಲಿದೆ.

ಆದರೆ, ಪುಟ್ಟರಾಜು ಅವರಿಗೆ ಕಾಂಗ್ರೆಸ್ ಮುಖಂಡರು ಗಾಳ ಹಾಕುತ್ತಿದ್ದು, ಹಸ್ತದಡಿ ನಿಲ್ಲುವಂತೆ ಮನವೊಲಿಸಿದ್ದಾರೆ. ಇದಕ್ಕೆ ಪುಟ್ಟರಾಜು ಮಾತ್ರ ಇನ್ನೂ ಯಾವುದೇ ಅಂತಿಮ ತೀರ್ಮಾನ ಕೈಗೊಂಡಿಲ್ಲ.

ದೊಡ್ಡಮಟ್ಟದಲ್ಲಿ ಆಪರೇಷನ್ ಹಸ್ತ ಮಾಡುತ್ತಿರುವ ಕಾಂಗ್ರೆಸ್, ಕೇವಲ ಬಿಜೆಪಿ, ಜೆಡಿಎಸ್ ಶಾಸಕರಷ್ಟೇ ಅಲ್ಲ, ಮತ ಗಳಿಸುವ ಆ ಪಕ್ಷಗಳ ವರ್ಚಸ್ವೀ ನಾಯಕರನ್ನು ಸೆಳೆಯಲು ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ. ಪುಟ್ಟರಾಜು ಪಕ್ಷಾಂತರಗೊಳ್ಳುವುದನ್ನು ತಪ್ಪಿಸಲು ಕುಮಾರಸ್ವಾಮಿ ಅವರು ಅವರೊಂದಿಗೆ ಎರಡು ಬಾರಿ ಮಾತುಕತೆ ನಡೆಸಿದ್ದಾರೆ. ಒಂದು ವೇಳೆ ಅವರು ಪಕ್ಷದಲ್ಲೇ ಉಳಿದುಕೊಂಡರೆ, ಗೌಡರನ್ನು ಹಾಸನದಿಂದಲೇ ಕಣಕ್ಕಿಳಿಸಲಿದ್ದಾರೆ ಎನ್ನಲಾಗಿದೆ.

# 120 ವರ್ಷಗಳಲ್ಲೇ ಕಡಿಮೆ ಮಳೆ : ಸೆಪ್ಟೆಂಬರ್‌ನಲ್ಲಿ ಪರಿಸ್ಥಿತಿ ಉತ್ತಮವಾಗುವ ನಿರೀಕ್ಷೆ

**(1ನೇ ಪುಟದಿಂದ)** ಶೇ.30ರಷ್ಟಾಗಿದೆ.

2005ರಲ್ಲಿ ಆಗಸ್ಟ್ ತಿಂಗಳಲ್ಲಿ ಶೇ.25ರಷ್ಟು ಮಳೆಯ ಕೊರತೆಯಾಗಿತ್ತು. 1965ರಲ್ಲಿ ಶೇ.24.6, 1920ರಲ್ಲಿ ಶೇ.24.4 ಹಾಗೂ 1913ರಲ್ಲಿ ಶೇ.24ರಷ್ಟು ಮಳೆಯ ಕೊರತೆಯಾಗಿತ್ತು ಎಂದು ಹವಾಮಾನ ಇಲಾಖೆಯ ಅಂಕಿ-ಅಂಶಗಳು ತಿಳಿಸಿವೆ.

ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲು ಎಲ್ ನೀನೋ ಕಾರಣ ಎಂದು ಹವಾಮಾನ ಇಲಾಖೆಯ ಮುಖ್ಯಸ್ಥ ಮೃತ್ಯುಂಜಯ ಮೊಹಾಪಾತ್ರ ಹೇಳಿದ್ದಾರೆ. ಪೆಸಿಫಿಕ್ ಸಮುದ್ರದಲ್ಲಿ ನೀರಿನ ತಾಪಮಾನ ಹೆಚ್ಚಾಗುವುದನ್ನು ಎಲ್ ನೀನೋ ಎಂದು ಗುರುತಿಸಲಾಗುತ್ತದೆ. ಇದರಿಂದಾಗಿ ಸಾಮಾನ್ಯವಾಗಿ ಭಾರತದಲ್ಲಿ ಮಳೆಯ ಕೊರತೆಯಾಗುತ್ತದೆ. ಇದೇ ವೇಳೆ ಬಂಗಾಳ ಕೊಲ್ಲಿ ಹಾಗೂ ಅರಬ್ಬೀ ಸಮುದ್ರದಲ್ಲಿ ಮುಂಗಾರಿಗೆ ಸೂಕ್ತ ಮಾರುತಗಳು ಕಂಡು ಬರದೇ ಇರುವುದೂ ಸಮಸ್ಯೆ ಬಿಗಡಾಯಿಸಲು ಕಾರಣವಾಗಿದೆ.

ಆದರೂ, ಸೆಪ್ಟೆಂಬರ್ ತಿಂಗಳು ಆಗಸ್ಟ್ ರೀತಿ ಒಣ ಆಗಿರುವುದಿಲ್ಲ. ಸೆಪ್ಟೆಂಬರ್ ತಿಂಗಳ ಪರಿಸ್ಥಿತಿ ತುಸು ಉತ್ತಮವಾಗಿರಲಿದೆ ಎಂದು ಭೂ ವಿಜ್ಞಾನ ಸಚಿವಾಲಯದ ಮಾಜಿ ಕಾರ್ಯದರ್ಶಿ ಮಾಧವನ್ ರಾಜೀವನ್ ಹೇಳಿದ್ದಾರೆ.

ಸೆಪ್ಟೆಂಬರ್ ತಿಂಗಳಲ್ಲಿ ಮಳೆಯ ಪ್ರಮಾಣ ವಾಡಿಕೆಯ ಶೇ.94ರಿಂದ 99ರಷ್ಟಿರುವ ಸಾಧ್ಯತೆ ಇದೆ ಎಂದು ಮೊಹಾಪಾತ್ರ ಹೇಳಿದ್ದಾರೆ.

# 31ರಿಂದ ಶಿವಮೊಗ್ಗ ವಿಮಾನ ನಿಲ್ದಾಣ ಸೇವೆ



ಬೆಂಗಳೂರು, ಆ.29- ಶಿವಮೊಗ್ಗದಲ್ಲಿ ರಾಜ್ಯ ಸರ್ಕಾರದ ವತಿಯಿಂದ ನೂತನವಾಗಿ ನಿರ್ಮಿಸಲಾಗಿರುವ ವಿಮಾನ ನಿಲ್ದಾಣದಿಂದ ವಿಮಾನಯಾನ ಸೇವೆಗಳು ಗುರುವಾರದಿಂದ (ಆ.31) ಆರಂಭವಾಗಲಿವೆ.

ಈ ಮೂಲಕ ಮಲೆನಾಡು ಮತ್ತು ಮಧ್ಯ ಕರ್ನಾಟಕದ ಜಿಲ್ಲೆಗಳ ಆರ್ಥಿಕ, ಕೈಗಾರಿಕಾ ಮತ್ತು ಶೈಕ್ಷಣಿಕ ಬೆಳವಣಿಗೆ ಹೊಸ ಎತ್ತರವನ್ನು ತಲುಪಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ. ಬಿ. ಪಾಟೀಲ್ ತಿಳಿಸಿದ್ದಾರೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ವಿಮಾನಯಾನ ಸೇವೆಗಳ ಮೊದಲ ಹೆಜ್ಜೆಯಾಗಿ ಇಂಡಿಗೋ ಸಂಸ್ಥೆಯ ವಿಮಾನವು ಗುರುವಾರ ಬೆಳಿಗ್ಗೆ 9.50ಕ್ಕೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟು 11.05ಕ್ಕೆ ಶಿವಮೊಗ್ಗ ತಲುಪಲಿದೆ. ಮೊದಲ ಯಾನದಲ್ಲಿ ತಾವೂ ಪ್ರಯಾಣಿಸಲಿದ್ದು, ಜೊತೆಯಲ್ಲಿ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಸೇರಿದಂತೆ ಮಲೆನಾಡು ಭಾಗದ ಜನಪ್ರತಿನಿಧಿಗಳೂ ಇರಲಿದ್ದಾರೆ. ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಇಳಿದೊಡನೆಯೇ ವಾಟರ್ ಸೆಲ್ಯೂಟ್ ಮೂಲಕ ಸಂಭ್ರಮಾಚರಣೆ ಮಾಡಲಾಗುವುದು ಎಂದಿದ್ದಾರೆ.

ಇದು ರಾಜ್ಯದ ಮಲೆನಾಡು ಭಾಗದಲ್ಲಿ ನಿರ್ಮಾಣವಾಗಿರುವ ಪ್ರಪ್ರಥಮ ವಿಮಾನ ನಿಲ್ದಾಣವಾಗಿದ್ದು, ಇದಕ್ಕೆ 450 ಕೋಟಿ ರೂ. ವಿನಿಯೋಗಿಸಲಾಗಿದೆ. ಶಿವಮೊಗ್ಗದಿಂದ 15 ಕಿ.ಮೀ. ದೂರದಲ್ಲಿರುವ ಸೋಗಾನೆ ಎಂಬಲ್ಲಿ 779 ಎಕರೆ ಜಾಗದಲ್ಲಿ ಏರ್‌ಪೋರ್ಟ್ ಮೈದಾಳಿದ್ದು, ಇದರಲ್ಲಿ ಏರ್‌ಬಸ್ ಮಾದರಿಯ ವಿಮಾನಗಳೂ ಬಂದಿಳಿಯುವ ಅನುಕೂಲಗಳನ್ನು ಕಲ್ಪಿಸಲಾಗಿದೆ. ಇದರಿಂದ ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳ ಜನರಿಗೆ ಅನುಕೂಲವಾಗಲಿದೆ ಎಂದು ಅವರು ವಿವರಿಸಿದ್ದಾರೆ.

ಮುಂದಿನ ದಿನಗಳಲ್ಲಿ ಶಿವಮೊಗ್ಗದಿಂದ ದೆಹಲಿ, ಮುಂಬೈ, ಹೈದರಾಬಾದ್, ಚೆನ್ನೈ, ಗೋವಾ ಮುಂತಾದ ನಗರಗಳಿಗೆ ನೇರ ವಿಮಾನ ಸಂಪರ್ಕ ಕಲ್ಪಿಸಲು ಪ್ರಯತ್ನಿಸಲಾಗುವುದು. ತಕ್ಷಣಕ್ಕೆ ಬೆಂಗಳೂರಿನಲ್ಲಿ ಈ ಸ್ಥಳಗಳಿಗೆ ಕನೆಕ್ಟಿಂಗ್ ವಿಮಾನಗಳು ಲಭ್ಯ ಇರಲಿವೆ. ಜೊತೆಗೆ, ಉಡಾನ್ ಯೋಜನೆಯಡಿ ವಿಮಾನಯಾನ ಸೇವೆ ವಿಸ್ತರಿಸಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಅದು ಅಂತಿಮ ಹಂತದಲ್ಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಮೂಲ ಯೋಜನೆಯಲ್ಲಿ ಈ ಏರ್‌ಪೋರ್ಟ್‌ನಲ್ಲಿ ನೈಟ್ ಲ್ಯಾಂಡಿಂಗ್ ಸೌಲಭ್ಯ ಇರಲಿಲ್ಲ. ಈಗ ಅದನ್ನು ಪರಿಷ್ಕರಿಸಿ, ಆ ಅನುಕೂಲವನ್ನೂ ನೀಡಲಾಗಿದೆ. 4,340 ಚದರ ಮೀಟರ್ ವಿಸ್ತೀರ್ಣದ ಪ್ರಯಾಣಿಕರ ಟರ್ಮಿನಲ್ ಮತ್ತು 3,050 ಮೀಟರ್ ಉದ್ದದ ರನ್‌ವೇಯನ್ನು ಇದು ಒಳಗೊಂಡಿದೆ. ಮುಂದಿನ ಮೂರು ವಾರಗಳ ವಿಮಾನಯಾನ ಟಿಕೆಟ್ ಮುಂಗಡವಾಗಿ ಬುಕ್ಕಿಂಗ್ ಆಗಿದ್ದು, ಒಳ್ಳೆಯ ಬೇಡಿಕೆ ವ್ಯಕ್ತವಾಗಿದೆ ಎಂದು ಹೇಳಿದರು.

# ಮಲೇಬೆನ್ನೂರು : ಭದ್ರಾ ಆರ್2ಗೆ ಶಾಸಕ ಬಿ.ಪಿ.ಹರೀಶ್, ದ್ಯಾವಪ್ಪ ರೆಡ್ಡಿ ಭೇಟಿ



ಮಲೇಬೆನ್ನೂರು, ಆ.29- ಭದ್ರಾ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ಕನಿಷ್ಟ ಪ್ರಮಾಣದ ನೀರು ಬರದಿರುವುದನ್ನು ಗಮನಿಸಿದ ಶಾಸಕ ಬಿ.ಪಿ.ಹರೀಶ್, ಭದ್ರಾ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪರೆಡ್ಡಿ ಅವರು ಬಸವಾಪಟ್ಟಣ ಬಳಿ ಇರುವ ಆರ್2ಗೆ ಭೇಟಿ ನೀಡಿ, ನೀರಿನ ಮಟ್ಟ ವೀಕ್ಷಿಸಿದರು.

ದಾವಣಗೆರೆ ಮತ್ತು ಮಲೇಬೆನ್ನೂರು ವಿಭಾಗಗಳ ನಾಲೆಗಳಿಗೆ ನೀರನ್ನು ವಿಭಜಿಸುವ ಆರ್2 ಗೇಟ್‌ನಲ್ಲಿ ಮಲೇಬೆನ್ನೂರು ವಿಭಾಗದ ನಾಲೆಗೆ 13.6 ಅಡಿ ನೀರು ಹರಿಯಬೇಕು. ಆದರೆ, 12.8 ಅಡಿ ನೀರು ಹರಿಯುತ್ತಿದೆ ಎಂದು ಶಾಸಕ ಹರೀಶ್ ಅವರು ಭದ್ರಾ ಎಸ್ಇ ಅವರಿಗೆ ಮೊಬೈಲ್ ಮೂಲಕ ಪ್ರಶ್ನಿಸಿದರು.

ನಮ್ಮ ವಿಭಾಗದ ನಾಲೆಗೆ ಬರಬೇಕಾದ ನೀರಿನ ಪ್ರಮಾಣವನ್ನು ಹರಿಸಲು ತಕ್ಷಣ ಗಮನಹರಿಸಬೇಕೆಂದು ಹರೀಶ್ ಮತ್ತು ದ್ಯಾವಪ್ಪರೆಡ್ಡಿ ಹಾಗೂ ರೈತ ಸಂಘದ ನಂದಿತಾವರೆ ಮುರುಗೇಂದ್ರಯ್ಯ ಅವರು ಸ್ಥಳದಲ್ಲಿದ್ದ ಎಇಇ ಧನಂಜಯ ಅವರಿಗೆ ಖಡಕ್ಕಾಗಿ ಹೇಳಿದರು.

# ನಗರದಲ್ಲಿ ಇಂದು ಗೃಹಲಕ್ಷ್ಮಿ ಯೋಜನೆಗೆ ಚಾಲನೆ

ಸರ್ಕಾರದ ಮಹತ್ವಕಾಂಕ್ಷೆ ಯೋಜನೆಯಾದ ಗೃಹಲಕ್ಷ್ಮಿ ಯೋಜನೆಗೆ ಇಂದು ರಾಜ್ಯಾದ್ಯಂತ ಚಾಲನೆ ನೀಡಲಾಗುತ್ತದೆ. ದಾವಣಗೆರೆ ಜಿಲ್ಲೆಯಲ್ಲಿ ನಗರದ 11 ಕಡೆ ವಿವಿಧ ಸ್ಥಳಗಳಲ್ಲಿ ಮತ್ತು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕಾರ್ಯಕ್ರಮ ನಡೆಯಲಿದೆ.


ಜಿಲ್ಲಾ ಮಟ್ಟದ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಗಂಟೆಗೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದ ವೇದಿಕೆ ಹಾಗೂ ನೇರಪ್ರಸಾರದ ಸಿದ್ದತೆ ಸೇರಿದಂತೆ ಆಗಮಿಸುವ ಫಲಾನುಭವಿಗಳಿಗೆ ಊಟ ಉಪಚಾರದ ಬಗ್ಗೆ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಪರಿಶೀಲನೆ ನಡೆಸಿದರು.

**ನಗರದಲ್ಲಿ ಇಂದು ಜರುಗುವ ಕಾರ್ಯಕ್ರಮ ಸ್ಥಳಗಳು:** ಮಹಾನಗರ ಪಾಲಿಕೆ ಕಛೇರಿ, ಪಿ.ಬಿ ರಸ್ತೆ ವಾರ್ಡ್ ನಂ.25, 17, ಮಹಾನಗರ ಪಾಲಿಕೆ ಕಛೇರಿ 3 ವಿಭಾಗ ವಾರ್ಡ್ ನಂ.25, ನೂರಾನಿ ಶಾದಿ ಮಹಲ್, ಇಮಾಂ ನಗರ, ವಾರ್ಡ್ ನಂ.11, ಆಯಿ ಶಾದಿಮಹಲ್, ಅಕ್ಸಾ ಮಸೀದಿ ಪಕ್ಕ, ವಾರ್ಡ್ ನಂ.12, ಚನ್ನಗಿರಿ ವಿರುಪಾಕ್ಷಪ್ಪ ಕಲ್ಯಾಣ ಮಂದಿರ, ಗಡಿಯಾರ ಕಂಬದ ಹತ್ತಿರ ವಾರ್ಡ್ ನಂ. 18, ಮಲ್ಲಿಕಾರ್ಜುನ ಸಮುದಾಯ ಭವನ, ಆರ್.ಎಂ.ಸಿ. ರಸ್ತೆ, ಬಂಬೂ ಬಜಾರ್ ವಾರ್ಡ್ ನಂ.20, 21, ಗೋಲ್ಡನ್ ಪ್ಯಾಲೇಸ್ ಬೂದಾಳ್ ರೋಡ್, ರಿಂಗ್ ರಸ್ತೆ, ವಾರ್ಡ್ ನಂ. 5, ಯಲ್ಲಮ್ಮದೇವಿ ಸಮುದಾಯ ಭವನ, ಜಾಲಿನಗರ ವಾರ್ಡ್ ನಂ. 7, ಚಿದಂಬರ ದೇವಸ್ಥಾನ ಸಮುದಾಯ ಭವನ, ನಿಟ್ಟುವಳ್ಳಿ ವಾರ್ಡ್ ನಂ. 29, ಅಂಬೇಡ್ಕರ್ ಸಮುದಾಯ ಭವನ, ಗಾಂಧಿ ನಗರ ವಾರ್ಡ್ ನಂ.1 ಇಲ್ಲಿ ಕಾರ್ಯಕ್ರಮ ನಡೆಯಲಿದೆ.

## ಇಂದು ವಿಕರವೇ ಪ್ರತಿಭಟನೆ

ದಾವಣಗೆರೆ: ತಮಿಳುನಾಡಿಗೆ ಕಾವೇರಿ ನದಿಯಿಂದ ನಿತ್ಯ 5000 ಕ್ಯೂಸೆಕ್ಸ್ ನೀರು ಬಿಡಲು ರಾಜ್ಯ ಸರ್ಕಾರಕ್ಕೆ ಆದೇಶಿಸಿರುವ ಕಾವೇರಿ ನೀರು ನಿರ್ವಹಣಾ ಸಮಿತಿ ವಿರುದ್ಧ ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಯಿಂದ ಆ.30ರ ಇಂದು ಬೆಳಿಗ್ಗೆ 11.30ಕ್ಕೆ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.


## ತೃತೀಯ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಸೂರ್ಯನಾರಾಯಣ ಎಲಿಗಾರ್**

ಎನ್.ಕೆ.ಎಸ್. ಸೈಕಲ್ ಮಾರ್ಟ್ ಮಾಲೀಕರು,
ನಿಧನ : 30.08.2020

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

✦ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಉಸ್ತುವಾರಿ ಸಚಿವರು
✦ ಆರ್.ಎಸ್. ಶೇಖರಪ್ಪ ✦ ಡಿ. ಬಸವರಾಜ್
✦ ಆರ್. ಹೆಚ್. ನಾಗಭೂಷಣ್ ✦ ದಿನೇಶ್ ಕೆ. ಶೆಟ್ಟಿ
✦ ಶ್ರೀನಿವಾಸ್ ಶಿವಗಂಗಾ ✦ ತಿಪ್ಪೇಸ್ವಾಮಿ ಶಾಮನೂರು
✦ ರಾಜುರೆಡ್ಡಿ ✦ ಡಾ. ರಮೇಶ್ ✦ ಮಂಜುನಾಥ ಬಾಪೂಜಿ
✦ ಶಶಿಧರ್ ✦ ಚೈತನ್ಯಕುಮಾರ್ ✦ ಸುರೇಶ್ ಜರೀಕಟ್ಟೆ
✦ ರಾಮನಾಥ ಖಮಿತ್ಕರ್ ✦ ಜಗದೀಶ್ ಮುದೇಗೌಡ್ರು ✦ ಅಜಯ್
✦ ಸುರಭಿ ಶಿವಮೂರ್ತಿ ✦ ವಿಠಲ್ ಅಮಾಸಿ ✦ ಅಜಯ್ ✦ ಹಾಲೇಶ್ ನಲ್ಕುಂದ


## ದೆಹಲಿಯಲ್ಲಿ ವರ್ಷ ಆಯಸ್ಸು ಕಡಿತ

**(1ನೇ ಪುಟದಿಂದ)** ದೆಹಲಿಯಲ್ಲಿ ಪಿಎಂ2.5 ಕಣಗಳ ಮಾಲಿನ್ಯ ವಿಶ್ವದಲ್ಲೇ ಅತಿ ಹೆಚ್ಚಾಗಿದೆ. ಇಲ್ಲಿ ಜನರು ತಮ್ಮ ಆಯುಷ್ಯದ 11.9 ವರ್ಷಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ದೆಹಲಿಯಲ್ಲಿ ಜನಸಾಂದ್ರತೆ ಹೆಚ್ಚಾಗಿರುವುದು, ವಾಹನಗಳ ಓಡಾಟ, ವಸತಿ ಹಾಗೂ ಕೃಷಿ ಚಟುವಟಿಕೆ ಮತ್ತಿತರೆ ಕಾರಣಗಳಿಂದ ಮಾಲಿನ್ಯ ಹೆಚ್ಚಾಗಿದೆ ಎಂದು ಅಧ್ಯಯನ ತಿಳಿಸಿದೆ. ವಿಶ್ವದ ಮೂರನೇ ಒಂದರಷ್ಟು ವಾಯುಮಾಲಿನ್ಯವು ಬಾಂಗ್ಲಾದೇಶ, ಭಾರತ, ಪಾಕಿಸ್ತಾನ, ಚೀನ, ನೈಜೀರಿಯ ಹಾಗೂ ಇಂಡೋನೇಷಿಯಾಗಳಲ್ಲಿ ಕಂಡು ಬರುತ್ತಿದೆ. ಈ ಭಾಗದ ಜನರು ಸರಾಸರಿ ಆರು ವರ್ಷಗಳ ಜೀವನಾವಧಿ ಕಳೆದುಕೊಳ್ಳುತ್ತಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.


|| ಶ್ರೀ ವೀರಭದ್ರೇಶ್ವರ ಪ್ರಸನ್ನ||

## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಲಿಂ|| ಸಂಗಪ್ಪಯ್ಯ ಪಟೇಲ್**

(ಗೌಡರಮನೆ, ತರಲಘಟ್ಟ ಗ್ರಾಮ, ಶಿಕಾರಿಪುರ ತಾ||)

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು, ನಿಮ್ಮ ನೆನಪು ನಮಗೆ ಸದಾ ಹಚ್ಚ ಹಸಿರು, ಸ್ಫೂರ್ತಿದಾಯಕ, ನಿಮ್ಮ ಪ್ರೀತಿ, ಆರೈಕೆ, ನೆನಪುಗಳೇ ನಮಗೆ ದಾರಿ ದೀಪ. ಸದಾ ನಿಮ್ಮ ಮಾರ್ಗದರ್ಶನದಂತೆ ನಡೆಯುತ್ತಿರುವ...

ಪತ್ನಿ : ಶ್ರೀಮತಿ ಶಾಂತಮ್ಮ ಸಂಗಪ್ಪಯ್ಯ ಪಟೇಲ್,
ಪುತ್ರ : ವೀರೇಶ್ ಪಟೇಲ್,
ಪುತ್ರಿ-ಅಳಿಯ : ಶ್ರೀಮತಿ ವಿನುತ, ಗಿರೀಶ್ ಮೈಸೂರುಮಠ
ಮೊಮ್ಮಕ್ಕಳು : ತೇಜಸ್ ಜಿ.ಎಂ., ಗೌರಿ ಜಿ.ಎಂ.,
ಗೌಡ್ರು ವಂಶಸ್ಥರು, ತರಲಘಟ್ಟ ಹಾಗೂ ಬಂಧು-ಮಿತ್ರರು.


## ಕಾವೇರಿ : ನೀರು ಹರಿಸಲು ಆದೇಶ

**(1ನೇ ಪುಟದಿಂದ)** ನೀರಿಗೂ ಕ್ಷಾಮ ಎದುರಾಗಲಿದೆ. ಕರ್ನಾಟಕ ನಿತ್ಯ 3,000 ಕ್ಯೂಸೆಕ್ ನೀರು ಹರಿಸಲು ಮಾತ್ರ ಸಮರ್ಥವಾಗಿದೆ ಎಂದು ಹೇಳಿದರು. ನಂತರ ಪ್ರಾಧಿಕಾರವು 5 ಸಾವಿರ ಕ್ಯೂಸೆಕ್ಸ್ ನೀರು ಹರಿಸುವಂತೆ ಕರ್ನಾಟಕಕ್ಕೆ ತಿಳಿಸಿದೆ. ಪ್ರಸಕ್ತ ಈ ವಿಷಯ ಸುಪ್ರೀಂ ಕೋರ್ಟ್ ಎದುರಿದ್ದು, ಕರ್ನಾಟಕ ಸರ್ಕಾರ ಅಲ್ಲಿ ನೀರು ಹರಿಸಲು ಸಾಧ್ಯವಿಲ್ಲ ಎಂಬ ವಾದ ಮಂಡಿಸಲು ನಿರ್ಧರಿಸಿದೆ.

### ದುಗ್ಗಪ್ಪ ಬಿ. ಬಲ್ಲೂರು ನಿಧನ



ದಾವಣಗೆರೆ ಕುರುಬರ ಕೇರಿ, ದುಗ್ಗಮ್ಮನ ದೇವಸ್ಥಾನದ ಹಿಂಭಾಗದ ವಾಸಿ ದುಗ್ಗಪ್ಪ ಬಿ. ಬಲ್ಲೂರು (58) ಅವರು ದಿನಾಂಕ 29.08.2023ರ ಮಂಗಳವಾರ ರಾತ್ರಿ 7.30ಕ್ಕೆ ನಿಧನರಾದರು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.08.2023ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಹಳೇ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ.

# ಚಂದ್ರನ ಮೇಲೆ ಗಂಧಕ ಪತ್ತೆ ಮಾಡಿದ ಪ್ರಗ್ಯಾನ್ ಹೈಡ್ರೋಜನ್ ಲಭ್ಯತೆಗಾಗಿ ಶೋಧ

ಬೆಂಗಳೂರು, ಆ. 29 – ಚಂದ್ರನ ಮೇಲೆ ಗಂಧಕ ಇರುವುದನ್ನು ಚಂದ್ರಯಾನದ ಭಾಗವಾಗಿರುವ ಪ್ರಗ್ಯಾನ್ ರೋವರ್ ಪತ್ತೆ ಮಾಡಿದೆ ಎಂದು ಇಸ್ರೋ ತಿಳಿಸಿದೆ.

ಅಲ್ಯುಮಿನಿಯಂ, ಕ್ಯಾಲ್ಸಿಯಂ, ಕಬ್ಬಿಣ, ಕ್ರೋಮಿಯಂ, ಟೈಟೇನಿಯಂ, ಮ್ಯಾಂಗನೀಸ್, ಸಿಲಿಕಾನ್ ಹಾಗೂ ಆಕ್ಸಿಜನ್‌ಗಳೂ ಸಹ ನಿರೀಕ್ಷೆಯಂತೆ ಪತ್ತೆಯಾಗಿವೆ ಎಂದು ಇಸ್ರೋ ತಿಳಿಸಿದೆ.

ಪ್ರಗ್ಯಾನ್ ರೋವರ್‌ನಲ್ಲಿರುವ ಎಲ್.ಐ.ಬಿ.ಎಸ್. ಎಂಬ ಉಪಕರಣ ಚಂದ್ರನ ಮೇಲ್ಮೈ ಅಧ್ಯಯನ ನಡೆಸಿದೆ. ಆಗ ಗಂಧಕ ಇರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಈ ರೀತಿಯ ಪತ್ತೆ ಕಾರ್ಯ ಆರ್ಬಿಟರ್‌ಗಳ ಮೂಲಕ ಸಾಧ್ಯವಾಗುತ್ತಿರಲಿಲ್ಲ ಎಂದು ಇಸ್ರೋ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಎಲ್.ಐ.ಬಿ.ಎಸ್. ಉಪಕರಣದ ಮೂಲಕ ಚಂದ್ರನ ಮೇಲ್ಮೈ ಅನ್ನು ತೀವ್ರ ಲೈಸರ್ ಅಲೆಗಳಿಗೆ ಗುರಿಪಡಿಸಲಾಗಿದೆ. ನಂತರ ನಡೆಸಲಾದ ಪ್ರಯೋಗದಲ್ಲಿ ಗಂಧಕ ಪತ್ತೆಯಾಗಿದೆ. ಚಂದ್ರನ ಮೇಲೆ ಹೈಡ್ರೋಜನ್ ಲಭ್ಯವಿದೆಯೇ ಎಂಬುದರ ಪತ್ತೆಗಾಗಿ ಪ್ರಯೋಗಗಳು ಮುಂದುವರೆದಿವೆ.

## ನಗರದ ಮಾಧ್ವ ಯುವಕ ಸಂಘದಲ್ಲಿ ಋಗ್ವೇದ ಉಪಾಕರ್ಮ



ದಾವಣಗೆರೆ, ಆ. 29- ನಗರದ ಕುವೆಂಪು ರಸ್ತೆಯ ಮಾಧ್ವ ಯುವಕ ಸಂಘದಲ್ಲಿ ಋಗ್ವೇದ ಉಪಾಕರ್ಮ ಆಯೋಜಿಸಲಾಗಿತ್ತು.

ಶ್ರೀ ಮಾಧ್ವ ಯುವಕ ಸಂಘದ ವತಿಯಿಂದ ಶ್ರಾವಣ ಶುದ್ಧ ತ್ರಯೋದಶಿ ಋಗ್ವೇದಿಗಳಿಗೆ ನಿತ್ಯ ಉಪಾಕರ್ಮವನ್ನು ಶ್ರೀ ಸರ್ವಜ್ಞಾಚಾರ್ಯ ಸೇವಾ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೇ.ಪಂ. ಜಯತೀರ್ಥ ಆಚಾರ್ ವಡೇರ್ ಅವರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳಾದ ಪ್ರಕಾಶ್ ಪಾಟೀಲ್, ನಾಗೇಶ್ ಪಾಟೀಲ್, ತಾಡಪತ್ರಿ ವೆಂಕಟಗಿರಿ, ರಘುನಾಥ್, ಸಮರ್ಥ ಕುಲಕರ್ಣಿ, ರಮೇಶ್ ನಾಡಿಗೇರ, ಶ್ರೀಧರ ಕುಲಕರ್ಣಿ, ಮಧುಸೂದನ್, ರಘೋತ್ತಮ, ಎಂ.ಜಿ. ಶ್ರೀಕಾಂತ್ ಭಾಗವಹಿಸಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಧರ್ಮ ಮನುಷ್ಯರನ್ನು ಭಗವಂತರನ್ನಾಗಿಸುವ ಶಕ್ತಿ ಹೊಂದಿದೆ



ರಾಣೇಬೆನ್ನೂರಿನ ಮಹಾಮೃತ್ಯುಂಜಯ ಜಪದ ಮಂಗಲ ಸಮಾರಂಭದಲ್ಲಿ ಜೈನ ಮುನಿ ಆಚಾರ್ಯ ಶ್ರೀ ಮಹೇಂದ್ರ ಸಾಗರ ಸುರೀಶ್ವರಜೀ

ರಾಣೇಬೆನ್ನೂರು, ಆ. 29- ಧರ್ಮ ಮನುಷ್ಯರನ್ನು ಭಗವಂತರನ್ನಾಗಿಸುವ ಶಕ್ತಿ ಹೊಂದಿದೆ. ಪಾಪ ಆ ಶಕ್ತಿಯನ್ನು ನಾಶ ಮಾಡುತ್ತದೆ. ಅಹಿಂಸೆ, ಶಾಂತಿ, ಸಮಾನತೆ, ಸಹಜೀವನ, ಸೌಹಾರ್ದತೆ ಇವು ಧರ್ಮ ಕಲಿಸುವ ಪಾಠಗಳಾಗಿವೆ. ಭಗವಂತರಾಗುವ ಪ್ರಯತ್ನಕ್ಕೆ ಈ ಪಾಠಗಳ ಅವಶ್ಯಕತೆ ಇದೆ ಎಂದು ಜೈನ ಮುನಿ ಆಚಾರ್ಯ ಶ್ರೀ ಮಹೇಂದ್ರಸಾಗರ ಸುರೀಶ್ವರಜೀ ನುಡಿದರು.

ಶ್ರೀಗಳು ರಂಗನಾಥ ನಗರದ ಜೈನ ಮಂದಿರದಲ್ಲಿ ನಡೆದ ಮಹಾಮೃತ್ಯುಂಜಯ ಜಪದ ಮಂಗಲ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ದೂರದರ್ಶನ, ಭಗವಂತ ಮತ್ತು ಗುರುಗಳ ದರ್ಶನವನ್ನು ದೂರ ಮಾಡುತ್ತಿದೆ. ಈಗೀಗ ಶಿಕ್ಷಣ ಹೆಚ್ಚುತ್ತಿದೆ, ಸಂಸ್ಕಾರ ಕಡಿಮೆಯಾಗುತ್ತಿದೆ. ಪರೋಪಕಾರಿಗಳಲ್ಲಿ ಸುರರಿದ್ದರೆ, ಸ್ವಾರ್ಥಿಗಳಲ್ಲಿ ಅಸುರರು ಮನೆ ಮಾಡಿರುತ್ತಾರೆ. ಧರ್ಮ ಅಸುರತ್ವವನ್ನು ಓಡಿಸುತ್ತದೆ. ಪಾಪದ ಅನುಮೋದನೆ ಅದನ್ನು ಹೆಚ್ಚಿಸುವುದಾಗಿದೆ. ಅದರ ನಿಂದನೆಯಿಂದ ಕಡಿಮೆಯಾಗಲಿದೆ ಎಂದು ಮುನಿ ಆಚಾರ್ಯ ಶ್ರೀ ಮಹೇಂದ್ರಸಾಗರ ಸುರೀಶ್ವರಜೀ ಅವರು ತಿಳಿಸಿದರು.

ಜೈನ ಸಮಾಜದವರು ಹೆಚ್ಚಿರುವ ನಾಡಿನ ದೊಡ್ಡಪಟ್ಟಣ, ನಗರಗಳಲ್ಲಿ ಆಗದ ಮೂವತ್ತು ಉಪವಾಸಗಳ ಈ ಮಹಾಮೃತ್ಯುಂಜಯ ಜಪ ಮಾಡಿರುವ ರಾಣೇಬೆನ್ನೂರು ಜೈನ ಸಮಾಜದ ಮಹಿಳೆಯರು, ಪುರುಷರು ಜಗತ್ತಿಗೇ ಒಳಿತನ್ನು ಬಯಸಿದ್ದಾರೆ. ಎಂಟು, ಹತ್ತು, ಹದಿನೈದು, ಇಪ್ಪತ್ತು ಉಪವಾಸ ಮಾಡಿದವರೂ ಸಹ ಅವರ ಪಾಲುದಾರರಾಗಿದ್ದಾರೆ ಎಂದು ಆಶೀರ್ವದಿಸಿದರು.

ಜೈನ್ ಶ್ವೇತಾಂಬರ ಸಂಘದ ಅಧ್ಯಕ್ಷ ಪ್ರಕಾಶ ಜೈನ್, ಪದಾಧಿಕಾರಿಗಳಾದ ಪ್ರೀತಂ ಜೈನ್, ಹುಕ್ಮಿಚಂದ್ ಜೈನ್, ಅಭಿಷೇಕ ಭಂಡಾರಿ, ಮಹೇಂದ್ರಕುಮಾರ ಜೈನ್, ರಮೇಶ ಬಂಡಾರಿ, ಸುರೇಶ ಜೈನ್, ತೇಜರಾಜ್ ಜೈನ್, ಚಂದುಲಾಲ್ ಗಾಂಧಿ ಮತ್ತಿತರರು, ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು.

### ಹದಿನಾರು ಸಾರೋಟಗಳು..

**ಎಲ್ಲಾ ಹಂತದ ಉಪವಾಸ ಮಾಡಿದ 46 ಮಹಿಳೆಯರು (ಯುವತಿಯರೇ ಹೆಚ್ಚು), 8 ಪುರುಷರನ್ನು 16 ಸಾರೋಟುಗಳಲ್ಲಿ ಕುಳ್ಳಿರಿಸಿದ ಮೆರವಣಿಗೆಯು ವರ್ತಕರ ಸಂಘದಿಂದ ಹೊರಟು, ಸಂಗಮ ಸರ್ಕಲ್, ದೊಡ್ಡಪೇಟೆ, ಅಶೋಕ ಸರ್ಕಲ್, ರೈಲ್ವೆ ನಿಲ್ದಾಣದ ಬಳಿ ಹಾಯ್ದು ಜೈನ್ ಮಂದಿರ ತಲುಪಿತು. ಜೈನ್ ಸಮಾಜದ ಎಲ್ಲರೂ ತಮ್ಮ ವ್ಯಾಪಾರ, ವಹಿವಾಟುಗಳನ್ನು ಬಂದ್ ಮಾಡಿಕೊಂಡು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಹೊರ ರಾಜ್ಯ, ಹೊರ ಜಿಲ್ಲೆಗಳಿಂದ ಬಂದಿದ್ದ ಉಪವಾಸ ಮಾಡಿದವರ ಬಂಧುಗಳು ಪಾಲ್ಗೊಂಡಿದ್ದರು. ಯುವಕ, ಯುವತಿಯರ ಗುಂಪುಗಳು ವಾಲಗದ ನಾದಕ್ಕೆ ಕುಣಿದು ಕುಪ್ಪಳಿಸುತ್ತಿದ್ದರು.**

## ನಗರದ ವಲಸೆ ಮಾಹಿತಿ ಕೇಂದ್ರ

# ನೋಂದಣಿಗೆ ಉಂಟು, ಕೆಲಸಕ್ಕೆ ಇಲ್ಲ

ದಾವಣಗೆರೆ, ಆ. 29 - ವಿದೇಶಗಳಲ್ಲಿ ಲಭ್ಯವಿರುವ ಉದ್ಯೋಗಾವಕಾಶ ಬಳಸಿಕೊಳ್ಳಲು ನಗರದ ಕಾರ್ಮಿಕ ಇಲಾಖೆ ಕಚೇರಿಯಲ್ಲಿ ಸ್ಥಾಪನೆಯಾಗಿದ್ದ ಅಂತರರಾಷ್ಟ್ರೀಯ ವಲಸೆ ಮಾಹಿತಿ ಕೇಂದ್ರ ನೋಂದಣಿಗುಂಟು ಕೆಲಸಕ್ಕಿಲ್ಲ ಎಂಬಂತಾಗಿದೆ!

ವಿದೇಶಕ್ಕೆ ತೆರಳಬಯಸುವ ಕಾರ್ಮಿಕರಿಗೆ ನೆರವಾಗಲು ದಾವಣಗೆರೆ, ಉಡುಪಿ, ವಿಜಯಪುರ ಹಾಗೂ ಯಾದಗಿರಿಗಳಲ್ಲಿ ಮಾಹಿತಿ ಕೇಂದ್ರಗಳನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿತ್ತು. ದಾವಣಗೆರೆಯಲ್ಲಿ ಜನವರಿ 6ರಂದು ಕೇಂದ್ರ ಪ್ರಾರಂಭಗೊಂಡಿತ್ತು.

ಈ ಹಿಂದೆ ಬಿಜೆಪಿ ಸರ್ಕಾರ ಇದ್ದ ಸಮಯದಲ್ಲಿ ಫೆಬ್ರವರಿ 17 ಜಿಲ್ಲಾಡಳಿತ ಭವನದಲ್ಲಿ ಕಾರ್ಯಕ್ರಮವೊಂದನ್ನು ಆಯೋಜಿಸುವ ಮೂಲಕ ಅಸಂಘಟಿತ ಕಾರ್ಮಿಕರಿಗೆ ಕೇಂದ್ರದ ಕುರಿತು ಮಾಹಿತಿಯನ್ನೂ ನೀಡಲಾಗಿತ್ತು.

ವಿದೇಶಕ್ಕೆ ತೆರಳಬಯಸುವ ಕಾರ್ಮಿಕರಿಗೆ ನೆರವಾಗಲು ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು (ಕೆ.ಎಸ್.ಯು.ಡಬ್ಲ್ಯೂ.ಎಸ್.ಎಸ್.ಬಿ.) ಸಾಗರೋತ್ತರ ನೇಮಕಾತಿ ಸಂಸ್ಥೆ ಆರಂಭಿಸಲಾಗಿದೆ. ಈ ಸಂಸ್ಥೆಯು ಕಾರ್ಮಿಕರು ವಿದೇಶಕ್ಕೆ ತೆರಳಲು ಅಗತ್ಯ ನೆರವು ಕಲ್ಪಿಸಲಿದೆ. ಸಂಸ್ಥೆಯು ಉಚಿತವಾಗಿ ಕಾರ್ಮಿಕರಿಗೆ ನೆರವಾಗಲಿದೆ ಎಂದು ತಿಳಿಸಲಾಗಿತ್ತು.

ವಿದೇಶಕ್ಕೆ ತೆರಳುವುದರಿಂದ ಹಿಡಿದು, ವಾಪಸ್ಸಾದ ನಂತರ ಪುನರ್ವಸತಿ ಹಾಗೂ ವಿಮೆ ನೆರವು ಪಡೆಯುವವರೆಗೂ ಮಂಡಳಿಯ ಸಂಸ್ಥೆ ಸಹಾಯ ಮಾಡಲಿದೆ ಎಂದು ತಿಳಿಸಲಾಗಿತ್ತು.

ಇದುವರೆಗೂ ವಲಸೆ ಮಾಹಿತಿ ಕೇಂದ್ರದಲ್ಲಿ 134 ಜನ ಪ್ರಾಥಮಿಕ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇವರೆಲ್ಲರೂ ಅಸಂಘಟಿತ ವಲಯದ ಕಾರ್ಮಿಕರು. ಮನೆ ಕೆಲಸ, ಫಿಟ್ಟರ್, ಎಲೆಕ್ಟ್ರೀಷಿಯನ್, ಟೈಲ್ಸ್, ಡ್ರೈವಿಂಗ್ ಇತ್ಯಾದಿ ಕೆಲಸಗಳಿಗೆ ಹೆಚ್ಚು ಜನರು ನೋಂದಣಿ ಮಾಡಿಸಿದ್ದಾರೆ.

ಅರ್ಜಿ ಸಲ್ಲಿಸಿದವರ ಪೈಕಿ ಮೂವರು, ಎರಡನೇ ಹಂತದಲ್ಲಿ ಹೆಚ್ಚಿನ ಮಾಹಿತಿಯನ್ನೂ ಕಾರ್ಮಿಕ ಇಲಾಖೆಗೆ ಸಲ್ಲಿಸಿದ್ದಾರೆ.

ಆದರೆ, ನೋಂದಣಿ ಮಾಡಿಸಿಕೊಂಡವರಿಗೆ ವಿದೇಶದ ಕೆಲಸ ಸಿಗುವುದು ಒತ್ತಟ್ಟಿಗಿರಲಿ, ಯಾವುದೇ ಉದ್ಯೋಗಾವಕಾಶದ ಮಾಹಿತಿಯೂ ಬಂದಿಲ್ಲ.

ಸಾಕಷ್ಟು ಖಾಸಗಿ ಕನ್ಸಲ್ಟೆನ್ಸಿ ಸಂಸ್ಥೆಗಳು, ಕಾರ್ಮಿಕರು ವಿದೇಶಗಳಿಗೆ ತೆರಳಲು ನೆರವಾಗುತ್ತಿವೆ. ಆದರೆ, ಕೆಲ ಸಂಸ್ಥೆಗಳು ಕಾನೂನು ಬಾಹಿರವಾಗಿ ಕೆಲಸ ಮಾಡುವ ಮೂಲಕ ಕಾರ್ಮಿಕರು ಸಮಸ್ಯೆಗಳನ್ನು ಎದುರಿಸಿದ ಘಟನೆಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಸರ್ಕಾರವೇ ಸಾಗರೋತ್ತರ ನೇಮಕಾತಿ ಸಂಸ್ಥೆ ಸ್ಥಾಪಿಸಿ ಅಸಂಘಟಿತ ಕಾರ್ಮಿಕರಿಗೆ ನೆರವಾಗುವುದು ಯೋಜನೆಯ ಉದ್ದೇಶವಾಗಿತ್ತು.

ಆದರೆ, ನೇಮಕಾತಿ ಸಂಸ್ಥೆ ಇದುವರೆಗೂ ಉದ್ಯೋಗದ ಯಾವುದೇ ಮಾಹಿತಿ ರವಾನಿಸಿಲ್ಲ. ಆರು ತಿಂಗಳಾದರೂ ಯಾರಿಗೂ ನೆರವು ಸಿಕ್ಕಿಲ್ಲ. ಸರ್ಕಾರ ಬದಲಾದ ನಂತರ ಹಿಂದಿನ ನೇಮಕಾತಿ ಸಂಸ್ಥೆ ಸ್ಥಗಿತಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ಇದುವರೆಗೂ ನೋಂದಣಿಯಾದವರಿಗೆ ಯಾವುದೇ ಸ್ಪಂದನೆ ಸಿಗದ ಕಾರಣ, ಹೊಸದಾಗಿ ನೋಂದಾಯಿಸಲೂ ಹೆಚ್ಚಿನ ಆಸಕ್ತಿ ಕಂಡು ಬರುತ್ತಿಲ್ಲ. ಒಟ್ಟಾರೆ ಈ ಯೋಜನೆ ಆರಂಭಿಕ ಹಂತದಲ್ಲೇ ಎಡವಿ ನಿಂತಲ್ಲೇ ನಿಂತಂತಾಗಿದೆ.

**ವಿದೇಶಕ್ಕೆ ತೆರಳಬಯಸುವ ಕಾರ್ಮಿಕರಿಗೆ ನೆರವಾಗಲು ಅಂತರರಾಷ್ಟ್ರೀಯ ವಲಸೆ ಮಾಹಿತಿ ಕೇಂದ್ರ ಆರಂಭಿಸಲಾಗಿತ್ತು. ನಮ್ಮಲ್ಲಿಗೆ ಬರುವ ಕಾರ್ಮಿಕರನ್ನು ನೋಂದಣಿ ಮಾಡಿಸಿಕೊಳ್ಳುತ್ತಿದ್ದೇವೆ. ಉದ್ಯೋಗಾವಕಾಶದ ಬಗ್ಗೆ ನೇಮಕಾತಿ ಸಂಸ್ಥೆ ಕ್ರಮ ತೆಗೆದುಕೊಳ್ಳಬೇಕಿದೆ.**

**- ಇಬ್ರಾಹಿಂ ಸಾಬ್, ಜಿಲ್ಲಾ ಕಾರ್ಮಿಕ ಅಧಿಕಾರಿ**

**ವಿದೇಶಕ್ಕೆ ವಲಸೆ ತೆರಳಲು ಖಾಸಗಿ ಕನ್ಸಲ್ಟೆನ್ಸಿ ಸಂಸ್ಥೆಗಳಿವೆ. ಆದರೆ, ಇವು ಮೋಸ ಮಾಡುವ ಸಾಧ್ಯತೆಗಳಿವೆ. ಈ ಕಾರಣಕ್ಕಾಗಿಯೇ ಸರ್ಕಾರಿ ಸಂಸ್ಥೆ ನಂಬಿಕಾರ್ಹ ಎಂದು ಹೆಸರು ನೋಂದಾಯಿಸಿದ್ದೆವು. ಆದರೆ, ಇದುವರೆಗೂ ಯಾವುದೇ ಮಾಹಿತಿಯಾಗಲೀ, ನೆರವಾಗಲೀ ದೊರೆತಿಲ್ಲ. ಇದರಿಂದಾಗಿ ನಿರಾಸೆಯಾಗಿದೆ.**

**- ಅಮ್ಜದ್ ಖಾನ್**

## ಶೀಘ್ರ ನಿಗಮ – ಮಂಡಳಿಗಳ ನೇಮಕಾತಿ : ಸಲೀಂ ಅಹಮದ್

ಬೆಂಗಳೂರು, ಆ.29 - ರಾಜ್ಯದ ನಿಗಮ-ಮಂಡಳಿಗಳಿಗೆ ಶೀಘ್ರದಲ್ಲಿ ನೇಮಕ ಮಾಡಲಾಗುತ್ತದೆ ಎಂದು ವಿಧಾನಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹಮದ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, ನಿಗಮ-ಮಂಡಳಿ ನೇಮಕ ಮಾಡುವ ಪ್ರಕ್ರಿಯೆ ಆರಂಭಿಸಿದ್ದಾರೆ. ನಮ್ಮ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಅಧಿಕಾರ ಸಿಗಲಿದೆ ಎಂದರು.

ರಾಜ್ಯ, ರಾಷ್ಟ್ರಕ್ಕೆ ಕಾಂಗ್ರೆಸ್ ಅನಿವಾರ್ಯವೆಂದು ಪಕ್ಷದ ಸಿದ್ಧಾಂತ ಒಪ್ಪಿ ಬರುವವರ ಬಗ್ಗೆ ವರಿಷ್ಠರು ತೀರ್ಮಾನ ಕೈಗೊಳ್ಳುತ್ತಾರೆ. ಕೆಲವು ಮುಖಂಡರು ಕಾಂಗ್ರೆಸ್ ಸೇರುವ ಬಗ್ಗೆ ನಾಯಕರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ಅವರು ಹೇಳಿದರು.

ನಾವಾಗಿ ಆಪರೇಷನ್ ಮಾಡಲ್ಲ. ಬೇರೆ ಪಕ್ಷದಲ್ಲಿ ಉಸಿರುಕಟ್ಟುವ ವಾತಾವರಣ ಇದ್ದರೆ ಬರಲಿ. ಬಿಜೆಪಿಯವರು ತಪ್ಪು ಮಾಡದಿದ್ದರೆ ತನಿಖೆಗೆ ಹೆದರುವುದೇಕೆ? ಸದನದಲ್ಲಿ ಚರ್ಚೆ ಮಾಡದೇ ಪಲಾಯನ ಮಾಡಿದರು ಎಂದು ಅವರು ಟೀಕಿಸಿದರು.

# ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಕಾರ್ಯ ಮಾನವ ಕುಲಕ್ಕೆ ಶಕ್ತಿ ತರುವ ಕೆಲಸ

### ಶಿವಮೊಗ್ಗದಲ್ಲಿನ ವಚನ ನೃತ್ಯ ಅಭಿಯಾನದಲ್ಲಿ ಸಂಸದ ರಾಘವೇಂದ್ರ ಶ್ಲಾಘನೆ



ಶಿವಮೊಗ್ಗ ಆ.29- ಇಲ್ಲಿನ ಕುವೆಂಪು ರಂಗಮಂದಿರದಲ್ಲಿ ಮೊನ್ನೆ ನಡೆದ 'ತುಮ್ಹಾರೆ ಸಿವಾ ಔರ್ ಕೋಯಿ ನಹೀ' ವಚನ ಸಂಸ್ಕೃತಿ ಅಭಿಯಾನವನ್ನು ಸಾಣೇ ಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾ ಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ತರಳಬಾಳು ಹಿರಿಯ ಗುರುಗಳು ಬಹಳ ವರ್ಷಗಳ ಹಿಂದೆಯೇ ಬಸವಣ್ಣನವರ ವಚನಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದು, ಕರ್ನಾಟಕದಲ್ಲಿ ಒಂದು ದಾಖಲೆಯೇ ಆಗಿತ್ತು, ಈಗ ಮಾಧ್ಯಮಗಳು ಬಹಳಷ್ಟು ಪ್ರಭಾವ ಹೊಂದಿವೆ. ಅಂಗೈಯಲ್ಲೇ ಇಡೀ ಪ್ರಪಂಚವನ್ನು ನೋಡಬಹುದು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಆಗ ಇಂತಹ ಅವಕಾಶ ಇರದೇ ಇದ್ದರೂ, ಗುರುಗಳು ಬಸವ ತತ್ವವನ್ನು ಪ್ರಚಾರ ಮಾಡಿದರು. ಬೇರೆ ಬೇರೆ ರಾಜ್ಯಗಳಲ್ಲಿ ನಾಟಕಗಳನ್ನು ಅಭಿನಯಿಸಿದರು. ಅದರಿಂದ ಸ್ಫೂರ್ತಿಯನ್ನು ಪಡೆದ ನಾವು ರಂಗಭೂಮಿಯನ್ನು ಸದ್ಬಳಕೆ ಮಾಡಿಕೊಂಡಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಂಸದ ಬಿ. ವೈ. ರಾಘವೇಂದ್ರ ಮಾತನಾಡಿ, ಈ ಅಭಿಯಾನ ದೊಡ್ಡ ತಪಸ್ಸು, ನಮ್ಮ ಶಿವಮೊಗ್ಗದಲ್ಲಿ ವಚನ ನೃತ್ಯರೂಪಕ ಮಾಡಲಿಕ್ಕೆ ಅವಕಾಶ ಮಾಡಿದ್ದಕ್ಕೆ ತುಂಬಾ ಸಂತೋಷವಾಯಿತು. ಈ ವಚನ ನೃತ್ಯದಲ್ಲಿ ಭಾಗವಹಿಸುವ ಕಲಾವಿದರು ಬಹಳಷ್ಟು ಪರಿಶ್ರಮ ಹಾಕಿದ್ದಾರೆ. 11 ಸಾವಿರ ಕಿಲೋಮೀಟರ್ ಪರ್ಯಟನೆ ಮಾಡಿ ನೃತ್ಯದ ಮೂಲಕ ತಮ್ಮ ಜೀವನವನ್ನು ಬದಲಾವಣೆ ಮಾಡಿಕೊಂಡು ಅತ್ಯುತ್ತಮ ಕಲಾವಿದರಾಗಿ ಹೊರಹೊಮ್ಮಿದ್ದಾರೆ ಎಂದರು.

ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ 'ಅಟ್ಯಾಚ್ಡ್ ಬಾತ್ ರೂಂ, ಡಿಟ್ಯಾಚ್ಡ್ ಫ್ಯಾಮಿಲಿ' ಅಂತ. ನಾವೆಲ್ಲರೂ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗ್ತಾ ಇದ್ದೇವೆ. ಹಿಂದೆಲ್ಲಾ ಅವಿಭಕ್ತ ಕುಟುಂಬಗಳಿದ್ದವು. ಒಂದೇ ಮನೆಯಲ್ಲಿ ಅನೇಕ ಜನರು ವಾಸ ಮಾಡ್ತಾ ಇದ್ದರು. ಈಗೆಲ್ಲಾ ಪ್ರತಿಯೊಬ್ಬರಿಗೂ ಒಂದೊಂದು ರೂಂ ಬೇಕು ಎನ್ನುವ ಸಂಸ್ಕೃತಿ ನಮ್ಮಲ್ಲಿ ಆಗ್ತಾ ಇದೆ. ಇಂತಹ ಸಂದರ್ಭದಲ್ಲಿ ಬಸವಣ್ಣನವರ ತತ್ವಗಳು ನೃತ್ಯ, ನಾಟಕದ ಮುಖಾಂತರ ಪಂಡಿತಾರಾಧ್ಯ ಶ್ರೀಗಳು ಮಾಡುತ್ತಿರುವ ಕಾರ್ಯ ಇಡೀ ಮಾನವ ಕುಲಕ್ಕೆ ಶಕ್ತಿ ತರುವಂಥ ಕೆಲಸವಾಗಿದೆ ಎಂದು ರಾಘವೇಂದ್ರ ಹೇಳಿದರು.

ವಿಧಾನ ಪರಿಷತ್ ಸದಸ್ಯ ರುದ್ರೇಗೌಡ್ರು ಮಾತನಾಡಿ, ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಅನೇಕ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಇಡೀ ರಾಷ್ಟ್ರದಾದ್ಯಂತ ಹಮ್ಮಿಕೊಂಡಿದ್ದಾರೆ. ಬಸವಣ್ಣನವರ ಕಾಲದಲ್ಲಾದ ಸಾಮಾಜಿಕ ಕ್ರಾಂತಿಯ ಪರಿಚಯ ಮಾಡುವ ಕೆಲಸವನ್ನು ಪೂಜ್ಯರು ನಿರಂತರವಾಗಿ ಮಾಡ್ತಾ ಬಂದಿದ್ದಾರೆ ಎಂದರು.

ಶೃತಿ ಆದರ್ಶ ಪ್ರಾರ್ಥಿಸಿದರೆ, ಬಾಳೆಕಾಯಿ ಮೋಹನ್ ಸ್ವಾಗತಿಸಿದರು. ಸಾಸ್ವೆಹಳ್ಳಿ ಸತೀಶ್ ನಿರೂಪಿಸಿದರು. ರುದ್ರೇಶ್ ವಂದಿಸಿದರು. ವೇದಿಕೆಯ ಮೇಲೆ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಾಕ್ಷರಿ, ಜ್ಯೋತಿ ಪ್ರಕಾಶ್, ಎಸ್. ಪಿ. ದಿನೇಶ್, ಸತೀಶ್ ಮತ್ತಿತರರಿದ್ದರು.

# ಹರಪನಹಳ್ಳಿ : ಮಕ್ಕಳಲ್ಲಿನ ಪ್ರತಿಭೆ ಹೊರತೆಗೆಯುವ ಕೆಲಸ ಶಿಕ್ಷಕರದ್ದಾಗಿರಬೇಕು

ಹರಪನಹಳ್ಳಿ, ಆ. 29- ಮಕ್ಕಳಿಗೆ ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ, ಮಕ್ಕಳಲ್ಲಿ ಅಡಗಿರುವಂತಹ ಪ್ರತಿಭೆಯನ್ನು ಗುರುತಿಸಿ ಹೊರ ತೆಗೆದು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಿ ಕಳಿಸುವಂತಹ ಕೆಲಸ ಶಿಕ್ಷಕರದ್ದಾಗಬೇಕು ಎಂದು ಯರಬಳ್ಳಿ ಉಮಾಪತಿ ಹೇಳಿದರು.

ತಾಲ್ಲೂಕಿನ ಯರಬಳ್ಳಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅರಸೀಕೆರೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿ.ಪಂ. ಮಾಜಿ ಉಪಾಧ್ಯಕ್ಷ ಡಿ. ಸಿದ್ದಪ್ಪ ಮಾತನಾಡಿ, ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕು, ಇಂದಿನ ವಿದ್ಯಾರ್ಥಿಗಳೇ ಮುಂದಿನ ದೇಶದ ಉತ್ತಮ ಪ್ರಜೆಗಳಾಗಬೇಕು, ಊರಿನ ಎಲ್ಲರ ಸಹಕಾರದಿಂದ ಅದ್ದೂರಿಯಾಗಿ ಪ್ರತಿಭಾ ಕಾರಂಜಿಯನ್ನು ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿ. ಆರ್. ಪಿ. ಅಣ್ಣಪ್ಪ, ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಕಥೆಗಾರ ಮಂಜಣ್ಣ, ನೌಕರರ ಸಂಘದ ಅಧ್ಯಕ್ಷ ರಾಮಪ್ಪ, ಪದ್ಮಲತಾ, ಅರ್ಜುನ್ ಪರುಸಪ್ಪ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಎಸ್‌ಡಿಎಂಸಿ ಅಧ್ಯಕ್ಷ ಎಸ್. ಅಜ್ಜಯ್ಯ, ಉಪಾಧ್ಯಕ್ಷರಾದ ಭಾಗ್ಯಮ್ಮ, ಗ್ರಾ.ಪಂ.ಅಧ್ಯಕ್ಷರಾದ ರಂಗಮ್ಮ, ಉಪಾಧ್ಯಕ್ಷರಾದ ಯಶೋಧಮ್ಮ, ಗ್ರಾ.ಪಂ. ಸದಸ್ಯರಾದ ಬಿ. ಸಿದ್ದೇಶ್, ಹೆಚ್. ಹನುಮಂತಪ್ಪ, ಚೌಡಮ್ಮ, ಮಂಜಮ್ಮ, ಸಿ. ಆರ್. ಪಿ. ಸಿದ್ದೇಶ್ವರ, ಬಂದಮ್ಮ, ಊರಿನ ಮುಖಂಡರಾದ ಜಾತಪ್ಪ, ಶ್ರೀಪತಿ, ಮುಖ್ಯ ಗುರುಗಳಾದ ಕರಿಬಸಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.



# ಕೈಕೊಟ್ಟ ಯೋಜನೆಗಳು, ಹಳಿ ತಪ್ಪಿದ ಆಡಳಿತ ; ಜನರ ನಂಬಿಕೆಗೆ ಸರ್ಕಾರದ ದ್ರೋಹ : ಬಿಜೆಪಿ ಆರೋಪ

ಬೆಂಗಳೂರು, ಆ.29 - ಮುಖ್ಯಮಂತ್ರಿ ಸಿದ್ದರಾಮಯ್ಯರ ನೇತೃತ್ವದ ಸರ್ಕಾರ ದ್ವೇಷದ ರಾಜಕಾರಣ ಮಾಡಿಕೊಂಡೇ ನೂರು ದಿನಗಳನ್ನು ಪೂರೈಸಿದೆ ಎಂದು ರಾಜ್ಯ ಬಿಜೆಪಿ ಇಂದಿಲ್ಲಿ ದೂರಿದೆ.

ಜನರಿಟ್ಟ ನಂಬಿಕೆ ಮತ್ತು ವಿಶ್ವಾಸಕ್ಕೆ ಈ ಸರ್ಕಾರ ದ್ರೋಹ ಬಗೆದಿದೆ. ಸಂಕಷ್ಟದಲ್ಲಿರುವ ರೈತರು ಆತ್ಮಹತ್ಯೆ ಹಾದಿ ತುಳಿದಿದ್ದಾರೆ. ಜನರ ಕಷ್ಟ, ಸುಖಗಳಿಗೆ ಸ್ಪಂದಿಸದೆ, ಹಿಂದಿನ ಆಡಳಿತದಲ್ಲಿ ನಡೆದಿರುವ ತಪ್ಪುಗಳನ್ನು ಹುಡುಕುವುದರಲ್ಲೇ ಕಾಲ ಕಳೆದಿದ್ದಾರೆ.

ಕಾಂಗ್ರೆಸ್ ಸರ್ಕಾರದ ನೂರು ದಿನಗಳ ಆಡಳಿತದ ಕುರಿತ 'ಕೈಕೊಟ್ಟ ಯೋಜನೆಗಳು ಹಳಿತಪ್ಪಿದ ಆಡಳಿತ' ಕಿರು ಹೊತ್ತಿಗೆ ಬಿಡುಗಡೆ ಮಾಡಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು, ಪಂಚಾಯ್ತಿ ಕಚೇರಿಯಿಂದ ಮುಖ್ಯಮಂತ್ರಿ ಕಚೇರಿವರೆಗೆ ಭ್ರಷ್ಟಾಚಾರ ಸದ್ದು ಮಾಡುತ್ತಿದೆ ಎಂದು ಹೇಳಿದ್ದಾರೆ.

ನಮ್ಮ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿ, ಲಂಚ ಮುಕ್ತ ಆಡಳಿತ ನೀಡುತ್ತೇವೆ ಎಂದು ಅಧಿಕಾರಕ್ಕೆ ಬಂದವರು ಅದರಲ್ಲೇ ಮುಳುಗಿ ಹೋಗಿದ್ದಾರೆ. ಲಂಚ ಪಡೆಯುವುದರಲ್ಲಿ ಇಡೀ ಆಡಳಿತ ವ್ಯವಸ್ಥೆಯನ್ನೇ ಬಲಿ ಕೊಟ್ಟಿದ್ದಾರೆ. ತಾವು ಮಾಡುತ್ತಿರುವ ತಪ್ಪನ್ನು ಮುಚ್ಚಿಕೊಳ್ಳಲು ಹಿಂದಿನ ನಮ್ಮ ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಬಗ್ಗೆ ತನಿಖೆ, ನಮ್ಮ ಜನಪ್ರಿಯ ಯೋಜನೆಗಳನ್ನು ಕೈಬಿಟ್ಟು ದ್ವೇಷದ ರಾಜಕೀಯಕ್ಕೆ ಮುಂದಾಗಿದ್ದಾರೆ ಎಂದು ಕಿಡಿ ಕಾರಿದರು.

ಕಾಂಗ್ರೆಸ್ ಸರ್ಕಾರವು 5 ವರ್ಷಗಳ ದಿಕ್ಸೂಚಿ ಆಗಬೇಕಿತ್ತು. ಆದರೆ, ಅದು ದಿಕ್ಕು ತಪ್ಪಿದ ಸರ್ಕಾರವಾಗಿದೆ. ಹಣಕಾಸಿನ ವ್ಯವಸ್ಥೆಯನ್ನು ಹಳಿ ತಪ್ಪಿಸಿದ್ದಾರೆ. ನಾವು ಫೆಬ್ರವರಿಯಲ್ಲಿ ಮಿಗತೆ ಬಜೆಟ್ ಕೊಟ್ಟಿದ್ದೆವು. ಆದರೆ, ಇವರು ಬಂದ ಬಳಿಕ 8 ಸಾವಿರ ಕೋಟಿಗೂ ಹೆಚ್ಚು ಸಾಲ ಮಾಡಿದ್ದಾರೆ.

ಸುಮಾರು 35 ಸಾವಿರ ಕೋಟಿ ಅಧಿಕ ತೆರಿಗೆ ವಿಧಿಸಿದ್ದಾರೆ. ಮೋಟಾರು ವಾಹನ ತೆರಿಗೆ, ಅಬಕಾರಿ ಸುಂಕ ಹೆಚ್ಚಳ ಮೊದಲಾದವು ಇದ್ದರೂ 12 ಸಾವಿರ ಕೋಟಿ ರೂ. ಕೊರತೆ ಬಜೆಟ್ ನೀಡಿದ್ದಾರೆ ಎಂದು ಆರೋಪಿಸಿದರು.

ಕೋವಿಡ್ ವೇಳೆ 14 ಸಾವಿರ ಕೋಟಿ ಕೊರತೆ ಇದ್ದುದನ್ನು ನಾವು ಸರಿದೂಗಿಸಿ ಮಿಗತೆ ಬಜೆಟ್ ಮಂಡಿಸಿದ್ದೇವೆ. ಇವರು ಕೋವಿಡ್ ಇಲ್ಲದಿದ್ದರೂ ಮತ್ತೆ ಕೋವಿಡ್ ಸ್ಥಿತಿಗೆ ಹಣಕಾಸಿನ ಸ್ಥಿತಿಯನ್ನು ತೆಗೆದುಕೊಂಡು ಹೋಗಿದ್ದಾರೆ ಎಂದರು. ಸರ್ಕಾರಿ ನೌಕರರ ವೇತನ ವಿಳಂಬವಾಗುತ್ತಿದೆ. ಇವರು ಅಧಿಕಾರಕ್ಕೆ ಬಂದ ಬಳಿಕ ಒಂದು ಕಿಮೀ ರಸ್ತೆಯನ್ನೂ ಮಾಡಿಲ್ಲ ಎಂದು ವ್ಯಂಗ್ಯವಾಡಿದರು.

ಬರಗಾಲ ಬಂದಾಗ ರೈತರಿಗೆ ಕನಿಷ್ಠ ಸಹಾಯ ಮಾಡಿಲ್ಲ. 2 ಬಾರಿ ಬಿತ್ತನೆ ಮಾಡಿ ಬೀಜ, ಗೊಬ್ಬರ ಹಾಕಿ ರೈತರು ಕಂಗಾಲಾಗಿದ್ದಾರೆ. ಸಾಲವೂ ಸಕಾಲದಲ್ಲಿ ಸಿಗುತ್ತಿಲ್ಲ ಎಂದರು. ನಾಲ್ಕು ದಿಕ್ಕಿನಲ್ಲಿ ಗಮನಿಸಿದರೂ ಸರ್ಕಾರ ವಿಫಲವಾಗಿದೆ. ಗೊಂದಲಗಳಲ್ಲಿ ಅದು ಸಿಲುಕಿ ಹಾಕಿಕೊಂಡಿದೆ. ಇದರ ಒಟ್ಟು ಪರಿಣಾಮವೆಂಬಂತೆ ಜನರಿಗೆ ಕೊಟ್ಟ ಮಾತಿಗೆ ಅದು ತಪ್ಪಿ ನಡೆದಿದೆ ಎಂದರು.

ಕಳೆದ 2 ತಿಂಗಳಿನಲ್ಲಿ 50ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಿದ್ದರಾಮಯ್ಯರ ಸರ್ಕಾರದ 2013-18ರ ನಡುವಿನ ಅಧಿಕಾರಾವಧಿಯಲ್ಲಿ ಭಾರತದಲ್ಲಿ ಅತಿ ಹೆಚ್ಚು ಅಂದರೆ 4,500 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಅದು ನಮ್ಮ ಅಧಿಕಾರದ ಅವಧಿಯಲ್ಲಿ ನಿಂತು ಹೋಗಿತ್ತು. ಈಗ ಮತ್ತೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು

ರೈತರ ಸಾಲ ವಸೂಲಿ ನಿಲ್ಲಿಸಿ. ಹೊಸ ಸಾಲ, ಬೀಜ- ಗೊಬ್ಬರಕ್ಕೆ ಹೊಸ ಅನುದಾನ ನೀಡುವ ಮೂಲಕ ಆತ್ಮಹತ್ಯೆ ಮಾಡಿಕೊಳ್ಳದಂತೆ ನೋಡಿಕೊಳ್ಳಿ ಎಂದು ಅವರು ಕಿವಿಮಾತು ಹೇಳಿದರು.

ಎಲ್ಲ ಇಲಾಖೆಯಲ್ಲಿ ವರ್ಗಾವಣೆಯದೇ ಸುಗ್ಗಿ ನಡೆದಿದೆ. ರೈತ ವಿದ್ಯಾನಿಧಿ, ಭೂಸಿರಿ, ಜೀವನ ಜ್ಯೋತಿ ರೈತರ ವಿಮೆ ಸೇರಿ ನಮ್ಮ ಕಾಲದ ರೈತರ ಕಾರ್ಯಕ್ರಮಗಳು ಸ್ಥಗಿತಗೊಂಡಿವೆ. ರೈತರ ಆದಾಯ ಹೆಚ್ಚಳ ಕಾರ್ಯಕ್ರಮಗಳು ನಿಂತಿವೆ. ಈ ಸರ್ಕಾರ ರೈತ ವಿರೋಧಿಯಾಗಿದೆ ಎಂದು ಟೀಕಿಸಿದರು.

# ಚಿತ್ರದುರ್ಗ : ಜಮೀನುಗಳಿಗೆ ಕೃಷಿ ಸಚಿವರ ಭೇಟಿ, ಹಾನಿ ಪರಿಶೀಲನೆ



ಚಿತ್ರದುರ್ಗ, ಆ. 29- ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಜಿಲ್ಲೆಯ ರೈತರ ಜಮೀನುಗಳಿಗೆ ಮಂಗಳವಾರ ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ಭೇಟಿ ನೀಡಿ ಬೆಳೆ ಹಾನಿ ಪರಿಶೀಲಿಸಿದರು.

ತಾಲ್ಲೂಕಿನ ವಿಜಯಪುರ ಹಾಗೂ ಲಕ್ಷ್ಮಿ ಸಾಗರ ಗ್ರಾಮದ ಮೆಕ್ಕೆಜೋಳ, ಶೇಂಗಾ ಜಮೀನಿಗೆ ಭೇಟಿ ನೀಡಿ ಬೆಳೆ ಹಾನಿ ಮಾಹಿತಿ ಪಡೆದರು.

ಹವಾಮಾನ ಮುನ್ಸೂಚನೆಯಂತೆ ಆಗಸ್ಟ್ ತಿಂಗಳಿನಲ್ಲಿ ಹೆಚ್ಚಿನ ಮಳೆ ಬೀಳುವ ನಿರೀಕ್ಷೆ ಇತ್ತು. ಆದರೆ ರಾಜ್ಯದಲ್ಲಿ ಈ ತಿಂಗಳು ಶೇ. 99 ರಷ್ಟು ಮಳೆ ಕೊರತೆಯಾಗಿದೆ. 130 ತಾಲ್ಲೂಕುಗಳಲ್ಲಿ ಬರ ಸ್ಥಿತಿ ಕುರಿತು ವರದಿ ಸಲ್ಲಿಸುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆ. 30 ರಂದು ಈ ವರದಿ ಸರ್ಕಾರದ ಕೈ ಸೇರಲಿದ್ದು, ಇದನ್ನು ಆಧರಿಸಿ ಬರ ಘೋಷಣೆ ಕುರಿತು ಸೆಪ್ಟೆಂಬರ್ ಮೊದಲ ವಾರದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.

ಜಿಲ್ಲೆಯಲ್ಲಿ ಶೇ.93 ರಷ್ಟು ಬಿತ್ತನೆಯಾಗಿದೆ. ಶೇ.30 ರಷ್ಟು ಮಳೆ ಕೊರತೆ ಕಂಡುಬಂದರೆ ಬರ ಎಂದು ಘೋಷಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಮೊದಲಿನಿಂದಲೂ ಚಿತ್ರದುರ್ಗ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ರಾಜ್ಯದ ಮಧ್ಯೆ ಇರುವ ಜಿಲ್ಲೆಯ ರೈತರ ಸ್ಥಿತಿ ಅರಿಯುವ ಸಲುವಾಗಿಯೇ ಜಿಲ್ಲಾ ಮಂತ್ರಿಗಳು ಹಾಗೂ ಸ್ಥಳೀಯ ಶಾಸಕರನ್ನು ಸಂಪರ್ಕಿಸಿ ಜಿಲ್ಲಾ ಪ್ರವಾಸ ಕೈಗೊಂಡಿದ್ದೇನೆ. ವಾಸ್ತವ ವರದಿ ಬಂದ ನಂತರ ಬರ ಪೀಡಿತ ತಾಲ್ಲೂಕುಗಳ ಸಂಖ್ಯೆ ಹೆಚ್ಚು ಕಡಿಮೆಯಾಗಲಿದೆ. ಬರ ಪಟ್ಟಿಯಲ್ಲಿ ಜಿಲ್ಲೆಯಲ್ಲಿ ಯಾವುದಾದರು ತಾಲ್ಲೂಕುಗಳು ಬಿಟ್ಟು ಹೋಗಿದ್ದರೆ ಪರಿಶೀಲಿಸಿ ಸೇರಿಸಲಾಗುವುದು ಎಂದು ತಿಳಿಸಿದರು.

**ರೈತರ ಪ್ರತಿಭಟನೆ:** ಜಿಲ್ಲೆಯನ್ನು ಸಂಪೂರ್ಣವಾಗಿ ಬರಪೀಡಿತ ಎಂಬುದಾಗಿ ಘೋಷಣೆ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸಿದರು. ಒಣಗಿದ ರಾಗಿ ಹಾಗೂ ಮೆಕ್ಕೆಜೋಳದ ಬೆಳೆಯನ್ನು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

### ಚಿತ್ರದುರ್ಗ: ಗೃಹಲಕ್ಷ್ಮಿ ಯೋಜನೆಗೆ 3.54 ಲಕ್ಷ ನೋಂದಣಿ

ಚಿತ್ರದುರ್ಗ, ಆ.29- ಮನೆ ಯಜಮಾನಿಗೆ ಮಾಸಿಕ 2 ಸಾವಿರ ರೂ. ನೀಡುವ 'ಗೃಹಲಕ್ಷ್ಮಿ' ಯೋಜನೆಗೆ ಜಿಲ್ಲೆಯಲ್ಲಿ ಈವರೆಗೆ 3.54 ಲಕ್ಷ ನೋಂದಣಿಯಾಗಿದೆ.

ನಗರ ಪ್ರದೇಶದಲ್ಲಿ 59,310 ಹಾಗೂ ಗ್ರಾಮೀಣ ಭಾಗದಲ್ಲಿ 2,95,576 ಸೇರಿ ಒಟ್ಟು 3,54,886 ಮಹಿಳೆಯುರು ಯೋಜನೆಗೆ ನೋಂದಾಯಿಸಿಕೊಂಡಿದಾರೆ.

ಚಿತ್ರದುರ್ಗ ತಾಲ್ಲೂಕು 82,536, ಚಳ್ಳಕೆರೆ 76,986, ಹಿರಿಯೂರು 63,565, ಹೊಳಲ್ಕೆರೆ 46,999, ಹೊಸದುರ್ಗ 50,580 ಹಾಗೂ ಮೊಳಕಾಲ್ಮುರು ತಾಲ್ಲೂಕಿನಲ್ಲಿ 34,220 ಮಹಿಳೆಯರು ಯೋಜನೆಗೆ ನೋಂದಾಯಿಸಿದ್ದಾರೆ.

ಶಕ್ತಿ ಯೋಜನೆಯಡಿ ಆ.23 ರವರೆಗೆ 43.75 ಲಕ್ಷ ಮಹಿಳೆಯರು ಚಿತ್ರದುರ್ಗ ವಿಭಾಗದ ಬಸ್‌ಗಳಲ್ಲಿ ಸಂಚಾರ ಮಾಡಿದ್ದಾರೆ. ಇದರ ಒಟ್ಟು ಮೊತ್ತ 16.57 ಕೋಟಿ ರೂ.ಗಳಾಗಿದೆ.

ಜಿಲ್ಲೆಯಲ್ಲಿ 4.7 ಲಕ್ಷ ವಿದ್ಯುತ್ ಬಳಕೆದಾರರು ಇದ್ದು, ಇದರಲ್ಲಿ ಜುಲೈ ಅಂತ್ಯದವರೆಗೂ 3.37 ಲಕ್ಷ ಗೃಹ ವಿದ್ಯುತ್ ಬಳಕೆದಾರರು ಗೃಹಜ್ಯೋತಿ ಯೋಜನೆಗೆ ನೋಂದಾಯಿಸಿಕೊಂಡಿದ್ದಾರೆ.

## ಗ್ರಾಮೀಣ ಮಹಿಳೆಯರಿಗೆ ವೃತ್ತಿ ತರಬೇತಿ

ದಾವಣಗೆರೆ, ಆ.29- ತೋಳಹುಣಸೆಯ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ಜಿಲ್ಲಾ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಹಿಳೆಯರಿಗೆ 30 ದಿನಗಳ ಕಾಲ ಉಚಿತವಾಗಿ ಊಟ ಮತ್ತು ವಸತಿಯೊಂದಿಗೆ ಮೊಬೈಲ್ ರಿಪೇರಿ, ಮೋಟರ್ ವೈಂಡಿಂಗ್, ಪೋಟೋಗ್ರಫಿ ಮತ್ತು ವಿಡಿಯೋಗ್ರಫಿ ತರಬೇತಿ ನೀಡಲಾಗುವುದು.

ತರಬೇತಿ ಪಡೆಯಲು ಇಚ್ಚಿಸುವ 18 ರಿಂದ 45 ವರ್ಷ ವಯಸ್ಸಿನ ಮಹಿಳೆಯರು ನಾಡಿದ್ದು ದಿನಾಂಕ 31ರೊಳಗಾಗಿ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 7975139332, 7019980484, 9964111314, 9538395817, 9481877076.

**ಶ್ರೀ ಮರುಳಸಿದ್ದೇಶ್ವರ ರೈಸ್ ಮಿಲ್, ಬಾಡ.**

ರೈಸ್ ಮಿಲ್‌ನಲ್ಲಿ ಕೆಲಸ ಮಾಡಿ ಅನುಭವವಿರುವವರು ರೈಸ್‌ಮಿಲ್ ಡ್ರೈವರ್ ಮತ್ತು ರೈಸ್‌ಮಿಲ್ ಮೆಕ್ಯಾನಿಕ್ ಕೆಲಸಕ್ಕೆ ಬೇಕಾಗಿದ್ದಾರೆ.

ESI, PF ನೊಂದಿಗೆ ಊಟ ಮತ್ತು ವಸತಿ ಉಚಿತ

**ಫೋನ್ : 63642 51291, 99809 46792**

# ಗೃಹಲಕ್ಷ್ಮಿಗೂ ಮುನ್ನ ತಾಯಿ ಚಾಮುಂಡೇಶ್ವರಿಗೆ ಕಾಣಿಕೆ ಸಲ್ಲಿಸಿದ ಡಿಸಿಎಂ ಡಿ.ಕೆ. ಶಿವಕುಮಾರ್



ಬೆಂಗಳೂರು, ಆ.29 - ನಾಡ ದೇವತೆ ಚಾಮುಂಡಿ ದೇವಿ ಹಾಗೂ ರಾಜ್ಯದ ಜನರ ಆಶೀರ್ವಾದದಿಂದ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾಗಿದೆ. ಚುನಾವಣೆಗೂ ಮುನ್ನ ದೇವಿ ಸನ್ನಿಧಾನದಲ್ಲಿ ಕೊಟ್ಟ ಮಾತಿನಂತೆ ನಮ್ಮ ಸರ್ಕಾರ ನಡೆದಿದೆ. ನುಡಿದಂತೆ ನಡೆದಿರುವುದು ಈ ಸರ್ಕಾರದ ಸಾಧನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ.

ಈ ನಾಡಿನ ಅಧಿದೇವತೆ ಚಾಮುಂಡೇಶ್ವರಿ ದೇವಿಯ ಸನ್ನಿಧಾನದಲ್ಲಿ ಚುನಾವಣೆಗೂ ಮುಂಚಿತವಾಗಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಇಟ್ಟು ಪೂಜೆ ಸಲ್ಲಿಸಿದ್ದೆವು. 1.10 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ತಲುಪಲಿದೆ ಎಂದು ಹೇಳಿದರು.

1.41 ಲಕ್ಷ ಮನೆಗಳಿಗೆ ಗೃಹಜ್ಯೋತಿ ಯೋಜನೆ ತಲುಪಿದೆ, ಶೂನ್ಯ ವಿದ್ಯುತ್ ಬಿಲ್ ಬಂದಿದೆ, 46 ಕೋಟಿ ಹೆಣ್ಣು ಮಕ್ಕಳು ಬಸ್‌ನಲ್ಲಿ ಪ್ರಯಾಣ ಮಾಡಿದ್ದಾರೆ. 1.39 ಕೋಟಿ ಕುಟುಂಬಗಳಿಗೆ ಅನ್ನಭಾಗ್ಯದ ಪ್ರಯೋಜನ ತಲುಪಿದೆ. ನೂರು ದಿನಗಳಲ್ಲಿ ಸಾಕಷ್ಟು ಸಾಧನೆಗಳನ್ನು ನಾವು ಮಾಡಿದ್ದೇವೆ.

ನೂರು ದಿನಗಳಲ್ಲಿ ನಮ್ಮ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಭರ್ಜರಿ ಕೊಡುಗೆಗಳನ್ನು ನೀಡಿದೆ. ಈ ದೇವಿ ಹಾಗೂ ನಮ್ಮ ನಡುವಣ ಸಂಬಂಧ ಭಕ್ತ ಹಾಗೂ ಭಗವಂತನ ನಡುವಿನ ಸಂಬಂಧ. ನಮ್ಮ ಬೇಡಿಕೆ ಏನಿದೆ ಅದನ್ನು ದೇವಿ ಈಡೇರಿಸಿದ್ದಾಳೆ.

ಮೈಸೂರಿನ ಭಾಗದ ಜನತೆ ನಮ್ಮ ಸರ್ಕಾರ ರಚನೆಗೆ ಹೆಚ್ಚಿನ ಶಕ್ತಿ ಕೊಟ್ಟಿದ್ದಾರೆ. ರಾಜ್ಯದ ಮಹಿಳೆಯರಿಗೆ ದೇವಿ ಚಾಮುಂಡೇಶ್ವರಿಯ ಆಶೀರ್ವಾದ ಇರಲಿ ಎಂದು ಗೃಹಲಕ್ಷ್ಮಿಯನ್ನು ಇಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಸುಮಾರು 12,600 ಕಡೆ ಈ ಕಾರ್ಯಕ್ರಮ ನೇರ ಪ್ರಸಾರವಾಗಲಿದೆ ಎಂದು ಅವರು ಹೇಳಿದ್ದಾರೆ.

ಗೃಹಲಕ್ಷ್ಮಿ ಯೋಜನೆ ಜಾರಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಲಾ, ತಾಯಿ ಚಾಮುಂಡೇಶ್ವರಿಗೆ 2 ಸಾವಿರ ಕಾಣಿಕೆಯನ್ನು ಸಮರ್ಪಿಸಿದರು. ಆ ಮೂಲಕ ಗೃಹಲಕ್ಷ್ಮಿ ಯೋಜನೆ ಭಾಗವಾಗಿ ನಾಡನ್ನು ಕಾಯುವ ದೇವತೆ ತಾಯಿ ಚಾಮುಂಡಿಗೆ ಮೊದಲ ಕಾಣಿಕೆ ಅರ್ಪಿಸಿದ್ದಾರೆ.

# ರಾಣೇಬೆನ್ನೂರಿನಲ್ಲಿ ಶ್ರೀ ಜಿವ್ಹೇಶ್ವರ ಜಯಂತ್ಯೋತ್ಸವ

ರಾಣೇಬೆನ್ನೂರು, ಆ. 29- ನಗರದ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ಸ್ವಕುಳ ಸಾಳಿ ಸಮಾಜದ ಮೂಲಪುರುಷ ಭಗವಾನ್ ಶ್ರೀ ಜಿವ್ಹೇಶ್ವರ ಸ್ವಾಮಿಯ ಜಯಂತ್ಯೋತ್ಸವವನ್ನು ಇಂದು ಆಚರಿಸಲಾಯಿತು.

ಮುಂಜಾನೆ 6-30ಕ್ಕೆ ಅಭಿಷೇಕ, ಕಾಕಡಾರತಿ, ಪೂಜೆಯ ನಂತರ ಜಿವ್ಹೇಶ್ವರ ಸ್ವಾಮಿಯ ಪಾಲಕಿ ಉತ್ಸವ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಸ್ಥಾನಕ್ಕೆ ಮರಳಿತು. ಪಾಲಕಿ ಉತ್ಸವದಲ್ಲಿ ದಾರಿಯುದ್ದಕ್ಕೂ ಮಹಿಳೆಯರು ಭಜನೆಗಳೊಂದಿಗೆ ನೃತ್ಯ ಮಾಡುತ್ತಾ ಸಾಗಿದ್ದ ದೃಶ್ಯ ಮನೋಹರವಾಗಿತ್ತು. ಪಾಲಕಿ ಉತ್ಸವದ ನಂತರ ಶ್ರೀ ಸ್ವಾಮಿಗೆ ತೊಟ್ಟಿಲು ಉತ್ಸವ, ಮಹಿಳೆಯರಿಗೆ ಉಡಿತುಂಬುವುದು



ನಂತರ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜದ ಅಧ್ಯಕ್ಷ ಖಂಡ್ಯಪ್ಪ ರೋಖಡೆ ವಹಿಸಿದ್ದರು.

ವೇದಿಕೆಯಲ್ಲಿ ಮಹಿಳಾ ಮಂಡಲದ ಅಧ್ಯಕ್ಷರಾದ ಶ್ರೀಮತಿ ತಾರಾಬಾಯಿ ಕ್ಷೀರಸಾಗರ ಹಾಗೂ ಯುವಕ ಮಂಡಳಿಯ ಅಧ್ಯಕ್ಷ ಭರತ್ ಏಕಬೋಟೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ನಾಗವೇಣಿ ಪಾಣಿಭಾತೆ ನೇತೃತ್ವದಲ್ಲಿ ರಕ್ಷಾಬಂಧನ ಕಾರ್ಯಕ್ರಮವೂ ಇದೇ ಸಂದರ್ಭದಲ್ಲಿ ನಡೆಯಿತು.

ಶ್ರೀಮತಿ ಭಾರತಿ ಏಕಬೋಟೆ ಸ್ವಾಗತಿಸಿದರು. ವಿಠ್ಠಲ್‌ರಾವ್ ಏಕಬೋಟೆ ವಂದಿಸಿದರು.

ಸಮಾಜದ ಹಿರಿಯರಾದ ಶ್ರೀಕಾಂತ ಕ್ಷೀರಸಾಗರ, ರಾಮಕೃಷ್ಣ ತಾಂಬೆ, ನಾರಾಯಣಪ್ಪ ಪಾಣಿಭಾತೆ, ವೆಂಕಟೇಶ ಏಕಬೋಟೆ, ವಿಠ್ಠಲ್ ಏಡಕೆ, ದೇವೇಂದ್ರಪ್ಪ ರೋಖಡೆ, ನಾಮದೇವ ಜಿಂದೆ, ಹರೀಶ ದಿವಟೆ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಚೀನಾ ಭೂಪಟಕ್ಕೆ ಭಾರತದ ತೀವ್ರ ಆಕ್ಷೇಪ

ನವದೆಹಲಿ, ಆ. 29 – ಅರುಣಾಚಲ ಪ್ರದೇಶ ಹಾಗೂ ಅಕ್ಸಾಯ್ ಚಿನ್ ಪ್ರದೇಶಗಳು ತನ್ನದೆಂದು ಚೀನಾ ಹೇಳುವ ಭೂಪಟದ ಬಗ್ಗೆ ಭಾರತ ಪ್ರಬಲ ಆಕ್ಷೇಪ ದಾಖಲಿಸಿದೆ. ಈ ರೀತಿಯ ಕ್ರಮಗಳಿಂದ ಗಡಿ ಪ್ರಶ್ನೆ ಕುರಿತ ನಿರ್ಣಯ ಸಂಕೀರ್ಣವಾಗುತ್ತದೆ ಎಂದು ತಿಳಿಸಲಾಗಿದೆ.

ಚೀನಾ ಈ ರೀತಿ ಹೇಳುತ್ತಿರುವುದಕ್ಕೆ ಯಾವುದೇ ಆಧಾರಗಳಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಅಸಂಗತ ವಾದ ಮಂಡಿಸುವುದರಿಂದ ಇತರರ ಪ್ರದೇಶ ತಮ್ಮದಾಗುವುದಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ತಿಳಿಸಿದ್ದಾರೆ.

ಚೀನಾದ ಭೂಪಟದಲ್ಲಿ ಭಾರತದ ಭಾಗವನ್ನು ತನ್ನದು ಎಂದಿರುವ ಬಗ್ಗೆ ಬಲಿ ರಾಯಭಾರಿ ಮಾರ್ಗದ ಮೂಲಕ ಪ್ರತಿಭಟನೆ ದಾಖಲಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ. ಚೀನಾ ನಿನ್ನೆ 2023ರ ಅಧಿಕೃತ ಭೂಪಟ ಬಿಡುಗಡೆ ಮಾಡಿತ್ತು. ಇದರಲ್ಲಿ ಅರುಣಾಚಲ ಪ್ರದೇಶ ಹಾಗೂ ಅಕ್ಸಾಯ್ ಚಿನ್‌ಗಳು ಚೀನಾಕ್ಕೆ ಸೇರಿದ್ದು ಎಂದು ಹೇಳಲಾಗಿತ್ತು.

# ಶಂಕರ ಸೇವಾ ಸಂಘದಿಂದ ಉಪಾಕರ್ಮ



ದಾವಣಗೆರೆ, ಆ. 29- ಶ್ರೀ ಶಂಕರ ಸೇವಾ ಸಂಘದ ವತಿಯಿಂದ ನಿತ್ಯ ಮತ್ತು ನೂತನ ಋಗ್ವೇದ ಉಪಾಕರ್ಮವನ್ನು ನಗರದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿತ್ತು. 10 ನೂತನ ವಟುಗಳು ಮತ್ತು ಐವತ್ತಕ್ಕೂ ಹೆಚ್ಚು ಬ್ರಾಹ್ಮಣರು ಉಪಾಕರ್ಮದಲ್ಲಿ ಪಾಲ್ಗೊಂಡಿದ್ದರು. ವೇದಬ್ರಹ್ಮ ಶ್ರೀ ಶಂಕರನಾರಾಯಣ ಶಾಸ್ತ್ರಿಗಳ ಶಿಷ್ಯಂದಿರುಗಳಾದ ಪುಟ್ಟಸ್ವಾಮಿ, ರಾಮಕೃಷ್ಣರಾವ್ ಉಪಾಕರ್ಮ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀನಿವಾಸ್ ಕೆ. ಜೋಷಿ, ಸುಬ್ಬಣ್ಣ (ಮಂಡಕ್ಕಿ), ರಮೇಶ್ ಪಾಟೀಲ್, ದೇವಸ್ಥಾನದ ಪುರೋಹಿತರುಗಳಾದ ಗಣೇಶ್ ಭಟ್, ರಾಮಚಂದ್ರ ಉಪಸ್ಥಿತರಿದ್ದರು.

# ಎಳೆಹೊಳೆ : ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ



ಮಲೇಬೆನ್ನೂರು, ಆ. 29- ಎಳೆಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬೆಂಗಳೂರಿನ ದಾವಣಗೆರೆ ಮಲ್ಲಿಕಾರ್ಜುನಯ್ಯ, ಜಯಂತ್, ವಿನೂತ್ ಅವರು ನೋಟ್‌ಬುಕ್ ಹಾಗೂ ಸ್ಕೂಲ್‌ಬ್ಯಾಗ್ ಸಾಮಗ್ರಿಗಳನ್ನು ವಿತರಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ನಂದಿಗಾವಿ ಜಗದೀಶ್, ಶಿಕ್ಷಕರು ಮತ್ತು ಗ್ರಾಮಸ್ಥರು ಈ ವೇಳೆ ಹಾಜರಿದ್ದರು.

# ಕಲಾಕುಂಚ ಎಲೆಬೇತೂರು ಶಾಖೆಯಿಂದ ಇಂದು ಸಂಗೀತ ಸಂಭ್ರಮ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಕಲಾಕುಂಚ ಎಲೆಬೇತೂರು ಶಾಖೆ ಮತ್ತು ಶ್ರೀ ವಿನಾಯಕ ವಿದ್ಯಾಸಂಸ್ಥೆಯ ಸಂಯುಕ್ತಾಶ್ರಯದಲ್ಲಿ 'ಶ್ರಾವಣ ಸಂಗೀತ ಸಂಭ್ರಮ ಉಚಿತ ಸ್ಪರ್ಧೆ, ರಕ್ಷಾ ಬಂಧನ' ಕಾರ್ಯಕ್ರಮವು ಇಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ಎಲೆಬೇತೂರಿನ ಶ್ರೀ ವಿನಾಯಕ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಈ ಸಮಾರಂಭದಲ್ಲಿ ಮಹಿಳೆಯರಿಗೆ, ಮಕ್ಕಳಿಗೆ ರಸ ರಂಜನೆ, ಆಟೋಟ ಸ್ಪರ್ಧೆ ಏರ್ಪಾಡಾಗಿದೆ. ವಿವ ರಕ್ಕೆ ಸಂಪರ್ಕಿಸಿ : 9880932671, 9902222241.

# ಐಡಿಯಾ ಹ್ಯಾಕಥಾನ್ ಮೌಲ್ಯ ಮಾಪನ

ದಾವಣಗೆರೆ, ಆ.29- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎಂಎಸ್‌ಎಂಇ ಐಡಿಯಾ ಮಹಿಳೆಯರ ಹ್ಯಾಕಥಾನ್ 3.0 ಮೌಲ್ಯಮಾಪನ ನಡೆಸಲಾಯಿತು. ಜೆಐಟಿಯನ್ನು ಭಾರತ ಸರ್ಕಾರದ ಕೈಗಾರಿಕೆಗಳು ಮತ್ತು ವಾಣಿಜ್ಯ ಸಚಿವಾಲಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಹೋಸ್ಟ್ ಸಂಸ್ಥೆ ಎಂದು ಗೊತ್ತುಪಡಿಸಲಾಗಿದೆ. ಯೋಜನೆ ಸ್ಕ್ರೀನಿಂಗ್ ಮತ್ತು ಮೌಲ್ಯಮಾಪನವನ್ನು ವಿವಿಧ ವಿಭಾಗಗಳ ತಜ್ಞರು ನಡೆಸಿದರು.

ಎಂಎಸ್‌ಎಂಇ ಸರ್ಕಾರದ ಜಂಟಿ ನಿರ್ದೇಶಕ ರಾಜೇಂದ್ರ ಕದಂ, ಜೆಐಟಿಯ ಆರ್ ಅಂಡ್ ಡಿ ನಿರ್ದೇಶಕ ಡಾ.ಮಂಜಪ್ಪ, ಎಂ.ಎಸ್. ಜಯಚಂದ್ರ ಆರಾಧ್ಯ, ಸಿಲಿಕಾನ್ ಮೈಕ್ರೋಸಿಸ್ಟಮ್ಸ್ ಸಿಇಒ, ಬೆಂಗಳೂರು, ವಿಕಾಸ್. ಎಂ., ಮಂಗಳೂರಿನ ಎನ್‌ಐಟಿಐಯ ಮಾಜಿ ಸಿಇಒ ಪ್ರಶಾಂತ್ ನಾಯಕ್, ಡ್ರೋನ್ ಜಂಕ್ಷನ್; ಶ್ರೇಯಸ್ ವೆರ್ಣೇಕರ್, ಸಿಇಒ, ರೋವೆ ಲ್ಯಾಬ್ಸ್ ಪ್ರೈ ಲಿ, ದಾವಣಗೆರೆ ವಿಶ್ವವಿದ್ಯಾನಿಲಯದ ರಸಾಯನ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ನಾಗಸ್ವರೂಪ್, ಕೆಎಸ್‌ಪಿಸಿಬಿಯ ಪರಿಸರ ಅಧಿಕಾರಿ ಡಾ.ಎಚ್.ಲಕ್ಷ್ಮೀಕಾಂತ, ಬಿಎಂಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು, ಇನ್‌ಕ್ಯುಬೇಷನ್ ಸೆಲ್ ಮುಖ್ಯಸ್ಥರು ಡಾ. ಕೆ.ಆರ್. ರವಿಚಂದ್ರ ಮತ್ತು ದಾವಣಗೆರೆ ಜೆಐಟಿಯ ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್ ಅವರು ವಿಚಾರಗಳ ಮೌಲ್ಯಮಾಪನ ಮಾಡಿದರು.

ಎಂಎಸ್‌ಎಂಇ ಸರ್ಕಾರದ ಜಂಟಿ ನಿರ್ದೇಶಕ ರಾಜೇಂದ್ರ ಕದಂ ಮಾತನಾಡಿ, 'ಐಡಿಯಾ ಹ್ಯಾಕಥಾನ್ 3.0' ಕುರಿತು ಮಹಿಳಾ ಉದ್ಯಮಿಗಳು ಸಾಮಾಜಿಕ ಬದಲಾವಣೆಯ ತಳಹದಿಯಾಗಿರುವುದರಿಂದ ಭಾರತ ಸರ್ಕಾರವು ಮಹಿಳಾ ಸಬಲೀಕರಣದ ಮೇಲೆ ಕೇಂದ್ರೀಕರಿಸುತ್ತದೆ ಮತ್ತು ಘನತೆ, ಅವಕಾಶ, ಅವರ ಪ್ರಯತ್ನಗಳನ್ನು ಶ್ಲಾಘಿಸುತ್ತದೆ ಎಂದರು.



# ಚಂದಮಾಮ ಬಾ ಬಾ ಚಕ್ಕಲಿ ಮಾಮ ಬಾ ಬಾ

ಚಂದಮಾಮ ಬಾ ಬಾ ಚಕ್ಕುಲಿ ಮಾಮ ಬಾ ಬಾ ಎಂದು ಹಾಡು ಹೇಳುತ್ತಾ ಅಳುತ್ತಿದ್ದ ಮಕ್ಕಳಿಗೆ ಒಬ್ಬ ತಾಯಿ ಸಮಾಧಾನ ಮಾಡುತ್ತಿದ್ದ ರೀತಿ, ನಮ್ಮ ಎಲ್ಲಾ ತಾಯಂದಿರು ತಮ್ಮ ಮಕ್ಕಳು ಊಟ ಮಾಡಲು ಹಠ ಮಾಡುತ್ತಿದ್ದರೆ, ಅವರನ್ನು ತಮ್ಮ ಕಂಕುಳದಲ್ಲಿ ಕೂರಿಸಿಕೊಂಡು ನೋಡು ಅಲ್ಲಿ ಚಂದಮಾಮ ಇದ್ದಾನೆ.ಎಷ್ಟು ಚೆನ್ನಾಗಿದ್ದಾನೆ ಬಾ ಬಾ ಅನ್ನು ಎಂದು ಅನ್ನುತ್ತಾ ಮಕ್ಕಳು ಕಣ್ಣುಬಿಟ್ಟು ಆಶ್ಚರ್ಯದಿಂದ ಬಾಯಿ ಅಗಲ ಮಾಡಿ ಚಂದಿರನ್ನು ನೋಡಿದ ತಕ್ಷಣ ತುತ್ತನ್ನು ಬಾಯಿಗಿಡುತ್ತಿದ್ದರು. ಈ ರೀತಿ ಮಕ್ಕಳಿಗೆ ಚಂದಿರನೊಬ್ಬ ಸೋದರ ಮಾಮನೆ ಆಗಿಬಿಟ್ಟ. ಮಗುವಿಗೆ ಹಠ ಬಂದು ಅಳು ನಿಲ್ಲಿಸದಿದ್ದರೆ ಮಗುವನ್ನು ಹೊರಗೆ ಕರೆದುಕೊಂಡು ಬಂದು, ನೋಡು ಚಂದಮಾಮ ಹೋಗ್ತಾ ಇದ್ದಾನೆ ಮನೆಗೆ ಬಾ ಅನ್ನು ಆಟ ಆಡಲು ಬಾ ಅನ್ನು ಎಂದು ರಮಿಸುತ್ತಿದ್ದರು.

ಮಕ್ಕಳು ಚಂದಮಾಮ ಅಲ್ಲಿ ಒಬ್ಬನೇ ಏಕೆ ಇದ್ದಾನೆ. ಅವನ ಜೊತೆ ಆಡಲಿಕ್ಕೆ ಯಾರಿದ್ದಾರೆ ಎಂಬ ಮುಗ್ಧತೆಯಿಂದ ಕೇಳುತ್ತಿದ್ದರೆ ತಾಯಿ ಚಂದಿರನ ಮೇಲೆ ಅಸ್ಪಷ್ಟ ಕಾಣುತ್ತಿದ್ದ ಚಿತ್ರವೇ ಒಂದು ಮೂಲ ಎಂದು ಹೇಳಿ ಅದರ ಜೊತೆಗೆ ಆಟ ಆಡುತ್ತಾನೆ ಎಂದು ತನ್ನ ಕಲ್ಪನೆಯ ರೀತಿಯಲ್ಲಿ ಹೇಳುತ್ತಿದ್ದಳು. ಒಟ್ಟಿನಲ್ಲಿ ಭಾರತೀಯ ತಾಯಂದಿರಿಗೆ ಚಂದಿರ ಒಂದು ಭಾವನಾತ್ಮಕ ಸಹೋದರ ಸಂಬಂಧಿ.

ಆದರೆ ಇಸ್ರೋ ವಿಜ್ಞಾನಿಗಳಿಗೆ ಚಂದಿರ ಒಂದು ಉಪಗ್ರಹ, ಅಲ್ಲಿ ಏನಿದೆ, ಮನುಷ್ಯರು ವಾಸ ಮಾಡಲು ಸಾಧ್ಯವೇ, ಅಲ್ಲಿ ಜಲಜನಕ, ಆಮ್ಲಜನಕವಿದೆಯೇ ಮತ್ತು ನೀರಿನ ಅಂಶವಿದೆಯೇ ಎಂಬ ನೂರೆಂಟು ಪ್ರಶ್ನೆಗಳು. ಹೀಗೆ ವಿಜ್ಞಾನಿಗಳ ಕುತೂಹಲಕ್ಕೆ ಉತ್ತರ ಸಿಕ್ಕಿಬಿಟ್ಟರೆ ಮುಂದೊಂದು ದಿನ ನಮ್ಮ ತಾಯಂದಿರು ತಮ್ಮ ಮಕ್ಕಳನ್ನು ಬೇಸಿಗೆ ರಜೆಯಲ್ಲಿ ನಿಜವಾಗಲು ಚಂದಮಾಮನ ಊರಿಗೆ ಕಳುಹಿಸಬಹುದು.

ಹೊಸದಾಗಿ ಮದುವೆಯಾದ ಜೋಡಿಗಳು ತಮ್ಮ ಮಧು ಚಂದ್ರವನ್ನು ಕಳೆಯಲು ಚಂದಿರನ ಲೋಕಕ್ಕೆ ಹೋಗಿಬರಬಹುದು. ರಸ ಕವಿಗಳು ತಮ್ಮ ಪ್ರೇಮ ಕವಿತೆಗಳನ್ನು ಬರೆಯಲು ಚಂದಿರನ ಅಂಗಳಕ್ಕೆ ಹೋಗಬಹುದು. ಟೂರಿಸಂ ಏಜೆನ್ಸಿಗಳು ಚಂದ್ರ ಲೋಕಕ್ಕೆ ಪ್ರವಾಸವನ್ನು ಇಡಬಹುದು.

ಹೀಗೆ ನಮ್ಮೆಲ್ಲರ ಮಧುರ ಕಲ್ಪನೆಗಳು, ಮುಂಬರುವ ದಿನಗಳಲ್ಲಿ ನಮ್ಮ ಹೆಮ್ಮೆಯ ಇಸ್ರೋ ವಿಜ್ಞಾನಿಗಳು ಸಾಕಾರ ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ.

**- ಎಂ.ಹೆಚ್.ಮಂಜುನಾಥ ರಾವ್**
ನಿ. ಮ್ಯಾನೇಜರ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

# ಅಪಘಾತ : ಪರಿಹಾರ ಪ್ರಕರಣಗಳು ಅಪರಾಧದ ರೀತಿ ಸಾಬೀತಾಗಬೇಕಿಲ್ಲ

ಬೆಂಗಳೂರು, ಆ. 29 – ರಸ್ತೆ ಅಪಘಾತದ ಪರಿಹಾರ ಪ್ರಕರಣಗಳು ಅಪರಾಧ ತನಿಖೆಯ ರೀತಿ ಸಾಬೀತಾಗಬೇಕೆಂಬ ನಿರೀಕ್ಷೆ ಇರುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ತಿಳಿಸಿದೆ.

ಮೋಟಾರು ಅಪಘಾತ ಕ್ಲೇಮುಗಳ ಪ್ರಕರಣಗಳು ಅಪರಾಧದ ವಿಚಾರಣೆಯ ರೀತಿಯಲ್ಲಿ ಸಾಬೀತಾಗಬೇಕಿಲ್ಲ. ಈ ವಿಷಯವನ್ನು ನ್ಯಾಯಾಲಯಗಳು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಎಂದು ಹೈಕೋರ್ಟ್ ತಿಳಿಸಿದೆ. ನ್ಯಾಯಮೂರ್ತಿಗಳಾದ ಕೆ. ಸೋಮಶೇಖರ್ ಹಾಗೂ ಕೆ. ರಾಜೇಶ್ ರಾಯ್ ಅವರನ್ನು ಒಳಗೊಂಡ ವಿಭಾಗೀಯ ಪೀಠ ಈ ನಿಲುವು ತಳೆದಿದೆ.

2019ರಲ್ಲಿ ನಡೆದ ಅಪಘಾತದಲ್ಲಿ ಎಂ.ಆರ್. ದಿವಾಕರ್ ಎಂಬುವವರು ಮೃತಪಟ್ಟಿದ್ದರು. ದಿವಾಕರ್ ಅವರಿದ್ದ ಮೋಟರ್ ಸೈಕಲ್‌ಗೆ ಕಾರೊಂದು ಬಡಿದು ಸಾವು ಸಂಭವಿಸಿತ್ತು. ಪರಿಹಾರಕ್ಕಾಗಿ ಅವರ ಪೋಷಕರಾದ ಚಿಕ್ಕ ತಾಯಮ್ಮ ಹಾಗೂ ರಾಮೇಗೌಡ ಅರ್ಜಿ ದಾಖಲಿಸಿದ್ದರು. ಮೋಟಾರು ಅಪಘಾತಗಳ ಕ್ಲೇಮುಗಳ ಟ್ರಿಬ್ಯೂನಲ್ ಪೋಷಕರಿಗೆ 15.43 ಲಕ್ಷ ರೂ.ಗಳ ಪರಿಹಾರ ಮಂಜೂರು ಮಾಡಿತ್ತು. ಪರಿಹಾರ ಹೆಚ್ಚಿಸುವಂತೆ ಅವರು ಹೈಕೋರ್ಟ್ ಮೊರೆ ಹೋಗಿದ್ದರು.

ಈ ಬಗ್ಗೆ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದ ವಿಮಾ ಕಂಪನಿಯಾದ ಬಜಾಜ್ ಅಲೈಯನ್ಸ್ ಇನ್ಶೂರೆನ್ಸ್, ಅಪಘಾತದಲ್ಲಿ ಕಾರು ಭಾಗಿಯಾಗಿರುವುದರ ಬಗ್ಗೆ ದೂರಿನಲ್ಲಿ ತಿಳಿಸಿಲ್ಲ. ದಿವಾಕರ್ ನಿರ್ಲಕ್ಷ್ಯದಿಂದಾಗಿ ಸಾವು ಸಂಭವಿಸಿದೆ ಎಂದು ಹೇಳಿತ್ತು. ಟ್ರಿಬ್ಯೂನಲ್ ಸಾಕ್ಷಿಗಳನ್ನು ಸಮಗ್ರವಾಗಿ ಪರಿಗಣಿಸಿ ತೀರ್ಪು ನೀಡಿದೆ. ನಿರ್ದಿಷ್ಟ ವಾಹನ ನಿರ್ದಿಷ್ಟ ರೀತಿಯಲ್ಲಿ ಅಪಘಾತಕ್ಕೆ ಕಾರಣವಾಗಿದೆ ಎಂಬುದನ್ನು ಕ್ಲೇಮುಗಳ ಸಂದರ್ಭದಲ್ಲಿ ಸಾಬೀತು ಪಡಿಸಬೇಕಿಲ್ಲ ಎಂದು ನ್ಯಾಯಾಲಯ ಹೇಳಿದೆ.

# ನಗರದಲ್ಲಿ ಇಂದು ಋಗ್ವೇದ ನಿತ್ಯ, ನೂತನ ಉಪಕರ್ಮ

ಶ್ರೀ ಶಂಕರ ಸೇವಾ ಸಂಘದ ಆಶ್ರಯದಲ್ಲಿ ಋಗ್ವೇದ ನಿತ್ಯ ಮತ್ತು ನೂತನ ಉಪಕರ್ಮವು ಇಂದು ಬೆಳಿಗ್ಗೆ 6 ಗಂಟೆಗೆ ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀ ಶಾರದಾಂಬಾ ದೇವಸ್ಥಾನದಲ್ಲಿ ಆಯೋಜಿಸಲಾಗಿದೆ. ಆಸಕ್ತ ತ್ರಿಮತಸ್ಥ ಬ್ರಾಹ್ಮಣರು ಮುಂಚಿತವಾಗಿ ಹೆಸರು ನೋಂದಾಯಿಸಲು 08192-221680, ಮೊ: 8296408068, 9964146122 ಸಂಪರ್ಕಿಸುವಂತೆ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಶಿ ತಿಳಿಸಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರದ ಮೊದಲನೆ ಬಸ್ ಸ್ಟಾಪ್ ಹತ್ತಿರ 2BHK ಮನೆಗಳು ಲೀಸ್‌ಗಿವೆ. ಸಂಪರ್ಕಿಸಿ : 97400 01129

**ಕರ್ನಾಟಕ ಗೃಹ ಮಂಡಳಿಯಲ್ಲಿ**
ಸೈಟುಗಳು, ಮನೆಗಳು ಮಾರಾಟಕ್ಕಿವೆ
50x80 West, 40x60 West, 30x50 East ಮನೆ 60 ಲಕ್ಷಕ್ಕೆ. 40x60 South 80 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
S.S. A, B Blockನಲ್ಲಿ M.T.R. Hotel ಗ್ರಾಂಡ್ ಹತ್ತಿರ 40x50 East, 80x50 East
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಬಾಡಿಗೆಗೆ ಮನೆಗಳು ದೊರೆಯುತ್ತವೆ**
ಆಂಜನೇಯ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆ, ಎಸ್.ಎಸ್. 'ಎ' ಬ್ಲಾಕ್, ಎಸ್.ಎಸ್. 'ಬಿ' ಬ್ಲಾಕ್, 3 ಬೆಡ್ ರೂಂ, 2 ಬೆಡ್ ರೂಂ.
ದಕ್ಷಿತ್ ಐನಳ್ಳಿ, ಏಜೆಂಟ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99027 56559

**ಖಾಲಿ ಜಾಗ ಬಾಡಿಗೆಗೆ ಇದೆ**
ದಾವಣಗೆರೆ ಪಿ.ಬಿ. ರಸ್ತೆ, ಸಬ್‌ರಿಜಿಸ್ಟ್ರಾರ್ ಆಫೀಸ್ ಎದುರು, # 857/18, 7ನೇ 'ಬಿ' ಕ್ರಾಸ್‌ನಲ್ಲಿ 50×88=4400 ಚದುರಡಿಯ ಖಾಲಿ ಜಾಗ ಬಾಡಿಗೆಗೆ ಇದೆ ಸಂಪರ್ಕಿಸಿ :
63662 34939, 98444 20009

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
97423-29043

**ಬೇಕಾಗಿದ್ದಾರೆ**
ಪ್ರತಿಷ್ಠಿತ ಫೈನಾನ್ಸ್ ಕಂಪನಿಗೆ ಅನುಭವವುಳ್ಳ ಪಿಗ್ಮಿ ಏಜೆಂಟ್ ಬೇಕಾಗಿದ್ದಾರೆ, ಅತ್ಯುನ್ನತ ಶ್ರೇಣಿಯ ಕಮೀಷನ್ ಹಾಗೂ ಮಾಸಿಕ ಸಂಬಳ ನೀಡಲಾಗುವುದು.
93805 79021

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್ ಸೇಲ್ (ಸಗಟು) ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ದಾವಣಗೆರೆ ನಗರದಲ್ಲಿ ಹಾಗೂ ನಗರದಿಂದ ಹೊರಗೆ ಕೆಲಸ ಮಾಡಲು ಸೇಲ್ಸ್ ಬಾಯ್ (ಹುಡುಗರು) ಬೇಕಾಗಿದ್ದಾರೆ, ಸಂಪರ್ಕಿಸಿ : ವೃಷಭ್ ಮೆಡಿಕಲ್ಸ್, ಜಾಲಿನಗರ, ಶಿವಾಲಿ ರಸ್ತೆ, ದಾವಣಗೆರೆ-06.
99805 32781

**ಮನೆಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ, 50x30 West ಮೂರು Floor, 30x45 East, 30x40 North.
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 East, 30x50 West, 20x48 West, 20x30 South, 20x30 South ಮನೆ 42 ಲಕ್ಷಕ್ಕೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**CAREER OPPORTUNITY**
Top MNC Looking for Candidates from Banking/Finance/Insurance Industry. Age 27 above. Fixed Pay upto 75K, Huge Incentives, PF,ESI, Reward & Recognition and Foreign travel.
98806 56168

**HOUSE FOR RENT**
2 BHK 1st floor, 3rd `B' Cross, 2nd stage, shivakumar swamy badavane, Near Sanjeevini Temple, Davanagere-05. Contact :
95912 26245

**ಮನೆಗಳು ಲೀಸ್‌ಗೆ ಇವೆ**
1BHK ವಿತ್ ಅಟ್ಯಾಚ್ ಇರುವ ಎರಡನೇ ಮಹಡಿಯ ಮನೆಗಳು ಲೀಸ್‌ಗೆ ಇವೆ, ಆಸಕ್ತರು ಸಂಪರ್ಕಿಸಿ, ಮನೆ. ನಂ. 389/G-54, S.S. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಹಿಂಭಾಗ, ಜಯನಗರ, ದಾವಣಗೆರೆ.
98447 10844, 88843 62134

**ಬೇಕಾಗಿದ್ದಾರೆ**
ಹೋಟೆಲ್ ಉದ್ಯಮಕ್ಕೆ ನುರಿತ ಕೆಲಸಗಾರರು ಬೇಕಾಗಿದ್ದಾರೆ.
94487 51313

**ಹೆಸರು ಬದಲಾವಣೆ**
ರಾಜೇಂದ್ರಪ್ಪ ಜೆ. ತಂದೆ ಮಲ್ಲೇಶಪ್ಪ, ಡೋ. ನಂ. 771/328, ಶ್ರೀರಾಮ ಬಡಾವಣೆ, ನಿಟುವಳ್ಳಿ, ದಾವಣಗೆರೆ ವಾಸಿಯಾದ ನನ್ನ ಹೆಸರು ಮೂಲತಃ ರಾಜಪ್ಪ ಜೆ. ಎಂದು ಇದ್ದು, ಅಲ್ಲದೆ ನನ್ನ ಮೋಟರ್ ಸೈಕಲ್ ಆರ್.ಸಿ. ಬುಕ್‌ನಲ್ಲೂ ರಾಜಪ್ಪ ಜೆ. ಎಂದು ನಮೂದಾಗಿದೆ. ಆದರೆ ನನ್ನ ಸ್ವಇಚ್ಛೆಯಿಂದ ನನ್ನ ಹೆಸರನ್ನು ರಾಜೇಂದ್ರಪ್ಪ ಜೆ. ಎಂದು ದಿನಾಂಕ 23.08.2023 ರಂದು ದಾವಣಗೆರೆ ನೋಟರಿಯವರ ಮುಂದೆ ಬದಲಾಯಿಸಿಕೊಂಡಿದ್ದೇನೆ. ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳು ರಾಜೇಂದ್ರಪ್ಪ ಜೆ. ಎಂಬ ಹೆಸರಿನಿಂದಲೇ ಮುಂದುವರೆಸುತ್ತೇನೆ ಎಂದು ಪ್ರಮಾಣೀಕರಿಸಿದ್ದೇನೆ. -ರಾಜೇಂದ್ರಪ್ಪ ಜೆ.

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಜಮೀನು ಮಾರಾಟಕ್ಕಿದೆ**
ಶಾಮನೂರಿನಿಂದ ಮಲೇಬೆನ್ನೂರಿಗೆ ಹೋಗುವ ರಸ್ತೆಯಲ್ಲಿ ಬೂದಿಹಾಳ್ ಹತ್ತಿರ 3 ಎಕರೆ 23 ಗುಂಟೆ ಬೋರ್‌ವೆಲ್ ನೀರಿನ ಸೌಕರ್ಯವಿರುವ ನೀರಾವರಿ ಜಮೀನು ಮಾರಾಟಕ್ಕಿದೆ.
99454 61501, 76196 37007

**ಮನೆ ಬಾಡಿಗೆಗೆ ಇದೆ**
ಚಿಕ್ಕಮಣ್ಣಿ ದೇವರಾಜ್ ಅರಸ್ ಬಡಾವಣೆಯಲ್ಲಿ ಎರಡನೇ ಮಹಡಿಯ ಸಿಂಗಲ್ ಬೆಡ್ ರೂಂ, ಉತ್ತರ ದಿಕ್ಕಿನ ಮನೆ, ಬೋರ್‌ವೆಲ್ ಮತ್ತು ಮುನ್ಸಿಪಲ್ ವಾಟರ್ ಇರುವ ಮನೆ ಬಾಡಿಗೆಗೆ ಇದೆ.
87628 79110

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್ ಹಾಗೂ ಸೇಲ್ಸ್ ಮನ್ ಬೇಕಾಗಿದ್ದಾರೆ ಅನುಭವವುಳ್ಳವರು ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಜೀವನ ಸಂಗಾತಿ ಬೇಕಾಗಿದ್ದಾರೆ**
ಟ್ರೇಡಿಂಗ್ ಬ್ಯುಸಿನೆಸ್ ಇರುವ ವ್ಯಕ್ತಿಗೆ ಚೆನ್ನಾಗಿ ಹೊಂದಿಕೊಂಡು ಹೋಗುವ ಯಾವುದೇ ಜಾತಿ ಅಭ್ಯಂತರವಿಲ್ಲದ 30 ವರ್ಷದೊಳಗಿನ ವಧು ಬೇಕಾಗಿದ್ದಾರೆ. 2ನೇ ಸಂಬಂಧಕ್ಕೂ ಆದ್ಯತೆ ಇದೆ.
ಫೋ. : 80733 42011

**ಸೈಟ್ ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆ ಶಾಮನೂರು 30x40 - East -Face. Contact :
81236 83761

**WANTED LADY TEACHER**
BA - B.Ed (1 Post)
Contact :
90359 16750, 95358 85997

**ಬೇಕಾಗಿದ್ದಾರೆ**
ಕೃಷಿ ಯಂತ್ರೋಪಕರಣಗಳ ರಿಪೇರಿ ಮಾಡಲು ನುರಿತ ಯುವಕರು ಹಾಗೂ ಕೃಷಿ ಯಂತ್ರೋಪಕರಣಗಳ ಬಗ್ಗೆ ಮಾಹಿತಿ ಇರುವ ಟ್ಯಾಲಿ ಅನುಭವ ಇರುವ ಯುವತಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
96201 32213, 89705 82958

**ಬೇಕಾಗಿದ್ದಾರೆ**
ಅರ್ಹ ಮಹಿಳಾ ಹಾಗೂ ಪುರುಷ ಟೆಲಿಕಾಲರ್ಸ್, ವಿದ್ಯಾರ್ಹತೆ : ಪಿಯುಸಿ/ಡಿಗ್ರಿ, ಸಂಬಳ : ರೂ. 8000/- ದಿಂದ ರೂ. 15000/- ವರೆಗೆ, (ಷರತ್ತುಗಳು ಅನ್ವಯ). ಕರೆ ಮಾಡಿ :
8050504567
ಸ್ಥಳ : ದೇವರಾಜ ಅರಸು ಬಡಾವಣೆ, ದಾವಣಗೆರೆ.

**ಆತಿಥ್ಯ ವೆಜ್ ರೆಸ್ಟೋರೆಂಟ್**
ಶುದ್ಧ ಮತ್ತು ತಾಜಾ ಮಸಾಲಾ ದೋಸೆ ಹಾಗೂ ಇಡ್ಲಿ ಹಿಟ್ಟು ದೊರೆಯುತ್ತದೆ. ಸಂಪರ್ಕಿಸಿ:
63661 04640

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಗ್ಯಾಸ್ ಗೀಜರ್**
Fully Automatic Rs. 2990/-
R.O. +UV ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.6.9.2023ರ ಬುಧವಾರ
ದಿ.7.9.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, TV, Washing Machine Technician System Operating ಗಾಗಿ Lady Candidate ಬೇಕಾಗಿದ್ದಾರೆ. Salary + Incentives ಸಹ ನೀಡುತ್ತೇವೆ.
98805 31599

**ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ದೈವಶಕ್ತಿ ಜ್ಯೋತಿಷ್ಯರು**
(ಪಂಡಿತ್ ಮಂಜುನಾಥ ಭಟ್)
ನಂ.1. ವಶೀಕರಣ ಸ್ಪೆಷಲಿಸ್ಟ್
ಸಮಸ್ಯೆ : ವಿದ್ಯೆ, ಉದ್ಯೋಗ, ಆರೋಗ್ಯ, ಹಣಕಾಸು, ಸಾಲಬಾಧೆ, ಮಾಟ ಮಂತ್ರ
ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
ಫೋ.: 9902324487

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಫೋ. : 98451 04109

**GOLDEN OPPORTUNITY**
Exclusively for the Retired/ Home Makers / Businessmen from Top MNC part time/full time Flexible Timing, No. Investment. Fixed Payout, huge incentives, PF, ESI, International Travel, Reward and recognition
63632 34430

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಅಂಕಪಟ್ಟಿ ಕಳೆದಿದೆ**
ನಾನು ಶಿವಪ್ರಸಾದ್ ಪಿ. ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಹರಿಹರ, ದಾವಣಗೆರೆ. ವಾಸಿಯಾಗಿದ್ದು, ಡಿಪ್ಲೋಮಾ 1ನೇ, 2ನೇ, 3ನೇ ಮತ್ತು 4ನೇ ಸೆಮ್‌ನ ಒಟ್ಟು ನಾಲ್ಕು (04) ಅಂಕಪಟ್ಟಿಗಳು ಮನೆ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಕಳೆದು ಹೋಗಿದ್ದು, (ದಿನಾಂಕ : 10.08.2023) ಯಾರಿಗಾದರೂ ಸಿಕ್ಕರೆ ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 93531 03280

**ಓಂ ಸಾಯಿ ಬಲಮುರಿ ಗಣಪತಿ ಜ್ಯೋತಿಷ್ಯ ಫಲಂ**
ಪಂಡಿತ್ ಬಿ.ಎಸ್.ರಾವ್
ಇವರು ನುಡಿದಂತೆ ನಡೆಯುವರು. ಸಮಸ್ಯೆಗಳಾದ ವ್ಯಾಪಾರದಲ್ಲಿ ಲಾಭ-ನಷ್ಟ, ವಿದ್ಯೆ, ಉದ್ಯೋಗ, ಲೈಂಗಿಕ, ಸ್ತ್ರೀ ಪುರುಷ ವಶೀಕರಣ, ಶತ್ರುನಾಶ, ಮನೆಯಲ್ಲಿ ಅಶಾಂತಿ, ಗಂಡ-ಹೆಂಡತಿ ಕಲಹ. ನಿಮ್ಮ ಯಾವುದೇ ಸಮಸ್ಯೆಗೆ ದೂರವಾಣಿ ಮುಖಾಂತರ 2 ದಿನಗಳಲ್ಲಿ ಪರಿಹಾರ.ಇಂದೇ ಕರೆ ಮಾಡಿ. ನಿಮ್ಮ ನಂಬಿಕೆಗೆ ಇಲ್ಲಿ ಮೋಸವಿಲ್ಲ.
ಮೊ : 99807 70791

**ಬೇಕಾಗಿದ್ದಾರೆ**
ಬೆಳಿಗ್ಗೆ 7 ಗಂಟೆಗೆ ಮನೆ ಕೆಲಸಕ್ಕೆ ಬರುವಂತಹ ಮಹಿಳೆ, ಲಿಂಗಾಯತ ಬೇಕಾಗಿದ್ದಾರೆ. (ಸಸ್ಯಹಾರಿಗಳಿಗೆ ಆದ್ಯತೆ. ಕಾಳಿದಾಸ ಸರ್ಕಲ್ ಹತ್ತಿರ, ದಾವಣಗೆರೆ.
94815 38996

**ಹುಡುಗರು ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಬೇಕಾಗಿದ್ದಾರೆ**
ಕಾರ್ ವಾಷ್, ವೀಲ್ ಅಲೈನ್‌ಮೆಂಟ್ ಬ್ಯಾಲೆನ್ಸಿಂಗ್ & ಕಾರ್ ಎಲೆಕ್ಟ್ರೀಷಿಯನ್ ಪೀಸ್ ವರ್ಕ್ ಮಾಡಲು ಬೇಕಾಗಿದ್ದಾರೆ.
ಶ್ರೀ ಪ್ರಿಯಾ ಕಾರ್ ಕೇರ್
ವಿದ್ಯಾನಗರ, ದಾವಣಗೆರೆ.
8867322545, 7349194155, 8867322645

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000 ರೂ.ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**Commercial Building Available for Rent**
Ground floor 1000 Sq.ft
First Floor 1700 Sq.ft,
Second Floor 1700 Sq.ft
with lift and Generator
Chetana Hotel Road.
94480 56468

# ಶೀಘ್ರವೇ 'ಅನ್ನಭಾಗ್ಯ' ಯೋಜನೆಯಡಿ ಅಕ್ಕಿ ವಿತರಣೆ



**ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವ ಕೆ.ಹೆಚ್. ಮುನಿಯಪ್ಪ**

ದಾವಣಗೆರೆ, ಆ. 29- ರಾಜ್ಯದ ಎಲ್ಲಾ ಬಿಪಿಎಲ್, ಎಪಿಎಲ್ ಪಡಿತರ ಚೀಟಿದಾರರಿಗೆ 'ಅನ್ನಭಾಗ್ಯ' ಯೋಜನೆಯಡಿ ಅಕ್ಕಿ ವಿತರಣೆ ಮಾಡಲಾಗುವುದು ಎಂದು ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವ ಕೆ.ಹೆಚ್. ಮುನಿಯಪ್ಪ ಹೇಳಿದರು.

ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಪಿಎಲ್ ಕಾರ್ಡ್‌ಗಳ ಪರಿಷ್ಕರಣಾ ಕಾರ್ಯದ ಹಿನ್ನೆಲೆಯಲ್ಲಿ ಅಕ್ಕಿ ವಿತರಣೆ ವಿಳಂಬವಾಗಿತ್ತು. ರಾಜ್ಯದಲ್ಲಿರುವ 1.28 ಕೋಟಿಯಷ್ಟು ಇರುವ ಕಾರ್ಡುಗಳ ಪೈಕಿ 1.7 ರಿಂದ 1.10 ಕೋಟಿ ಕಾರ್ಡುಗಳಿಗೆ 5 ಕೆಜಿ ಅಕ್ಕಿ ಹಣ ಪಾವತಿಸಲಾಗಿದೆ. ಶೀಘ್ರವೇ ಆಗಸ್ಟ್ ತಿಂಗಳ ಅಕ್ಕಿ ಹಣವನ್ನು ಪಾವತಿಸಲಾಗುವುದು ಎಂದರು.

ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಐದು ಗ್ಯಾರಂಟಿ ಯೋಜನೆಗಳ ನಾಲ್ಕನೆಯ 'ಗೃಹಲಕ್ಷ್ಮಿ' ಯೋಜನೆಗೆ ನಾಳೆ ದಿನಾಂಕ 30 ರಂದು ಮೈಸೂರಿನಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಚಾಲನೆ ನೀಡಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಡಿಸೆಂಬರ್ ತಿಂಗಳಲ್ಲಿ 'ಯುವನಿಧಿ' ಯೋಜನೆಯನ್ನೂ ಸಹ ಪ್ರಾರಂಭಿಸಲಾಗುವುದು ಎಂದ ಅವರು, ರಾಜ್ಯದಲ್ಲಿ 21 ಲಕ್ಷದಷ್ಟು ಕಾರ್ಡ್‌ಗಳಿಗೆ ಬ್ಯಾಂಕ್ ಖಾತೆ ಇರಲಿಲ್ಲ. 7 ರಿಂದ 8 ಲಕ್ಷ ಕಾರ್ಡ್‌ಗಳಿಗೆ ಖಾತೆ ಮಾಡಿಸಲಾಗಿದೆ. ಹಾಗಾಗಿ ಹಣ ಪಾವತಿಸುವುದು ವಿಳಂಬವಾಗಿತ್ತು. ಎಲ್ಲಾ ಕಾರ್ಡುಗಳ ಪರಿಷ್ಕರಣೆ ಮುಗಿದ ನಂತರ ಹಣ ಜಮೆ ಮಾಡಲಾಗುವುದು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾತನಾಡಿ, ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಬದಲಿಗೆ ಹಣ ನೀಡುವುದನ್ನು ಎಲ್ಲರೂ ಸ್ವಾಗತಿಸಿದ್ದಾರೆ. ಅನ್ನಭಾಗ್ಯ ನಿಜಕ್ಕೂ ಒಳ್ಳೆಯ ಯೋಜನೆ, ಯಾವುದೇ ಗೊಂದಲಗಳಿಲ್ಲ ಎಂದು ತಿಳಿಸಿದರು.

ಮಾಜಿ ಸಚಿವ ಹೆಚ್.ಆಂಜನೇಯ ಮಾತನಾಡಿ, ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುವ ಬಗ್ಗೆ ಇನ್ನೂ ಚಿಂತನೆ ನಡೆಸಿಲ್ಲ. ಹೈಕಮಾಂಡ್ ಟಿಕೆಟ್ ನೀಡಿದರೆ ನೋಡುತ್ತೇನೆ ಎಂದರು.

ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಯಲ್ಲಿ ಗೆಲ್ಲಬೇಕಿತ್ತು. ಕ್ಷೇತ್ರದ ಮತದಾರರು ಸೋಲಿಸಿದ್ದಾರೆ. ಗೆದ್ದಿದ್ದರೆ ಉತ್ತಮ ಸ್ಥಾನದಲ್ಲಿರುತ್ತಿದ್ದೆ. ನಾನು ಚಿಕ್ಕಂದಿನಿಂದಲೇ ಹೋರಾಟದ ಹಾದಿಯಲ್ಲಿ ಬಂದವನು. ಶೋಷಿತರು, ದಲಿತರು, ಬಡವರ ಪರ ಹೋರಾಟವನ್ನು ಮುಂದುವರೆಸುತ್ತೇನೆಂದು ಹೇಳಿದರು.

# ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪ್ರಬಲ ಆಕಾಂಕ್ಷಿ: ಶಿವಕುಮಾರ್ ಒಡೆಯರ್

ಜಗಳೂರು, ಆ.29- ಲೋಕಸಭಾ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಪಡೆಯಲು ಪ್ರಬಲ ಆಕಾಂಕ್ಷಿಯಾಗಿದ್ದೇನೆ ಎಂದು ಮಾಜಿ ಸಂಸದ ದಿ. ಚನ್ನಯ್ಯ ಒಡೆಯರ್ ಅವರ ಪುತ್ರ ನಿವೃತ್ತ ಇಂಜಿನಿಯರ್ ಶಿವಕುಮಾರ್ ಒಡೆಯರ್ ತಿಳಿಸಿದ್ದಾರೆ.

ತಾಲ್ಲೂಕಿನ ಬಿಳಿಚೋಡು ಗ್ರಾಮದ ಶಿವಕುಮಾರ್ ಒಡೆಯರ್ ಅವರು, ಮೂರು ಬಾರಿ ಮಾಜಿ ಸಂಸದರಾಗಿ ಜಿಲ್ಲೆಯಲ್ಲಿ ಉತ್ತಮ ಆಡಳಿತ ನೀಡಿದ ಚನ್ನಯ್ಯ ಒಡೆಯರ್ ಅವರ ಪುತ್ರರಾಗಿದ್ದು. ಲೋಕೋಪಯೋಗಿ ಇಲಾಖೆ ಮುಖ್ಯ ಇಂಜಿನಿಯರ್ ಆಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದು, ರಾಜಕೀಯ ಸೇವೆ ಮಾಡಲು ಬಯಸಿರುವೆ ಎಂದರು.

**ಕ್ಷೇತ್ರ ಪರ್ಯಟನೆ :** ದಾವಣಗೆರೆ ಲೋಕಸಭಾ ಕ್ಷೇತ್ರದ ಹರಿಹರ, ಜಗಳೂರು, ದಾವಣಗೆರೆ ಉತ್ತರ ಹಾಗೂ ದಕ್ಷಿಣ, ಮಾಯಕೊಂಡ, ಚನ್ನಗಿರಿ, ಹೊನ್ನಾಳಿ, ವಿಧಾನ ಕ್ಷೇತ್ರಗಳಲ್ಲಿ ವಿವಿಧ ಮುಖಂಡರುಗಳನ್ನು ಭೇಟಿ ಮಾಡಿ ಸಭೆ, ಸಮಾಲೋಚನೆ, ಕ್ಷೇತ್ರ ಪರ್ಯಟನೆ ನಡೆಸಿರುವೆ ಎಂದು ತಿಳಿಸಿದ್ದಾರೆ.

ಸ್ಥಳೀಯರು ರಾಜಕೀಯ ಮುತ್ಸದ್ದಿಗಳ ಪುತ್ರರೂ, ರಾಜಕೀಯ ಸೇವೆಯಲ್ಲಿ ನಿರಂತರವಾಗಿ ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಆಗಮಿಸಿರುವುದು. ವಿಶೇಷ. ಇವರ ಸಹೋದರ ಡಾ.ಉದಯಶಂಕರ್ ಒಡೆಯರ್ ಅವರೂ ರಾಜಕಾರಣಿಗಳ ನಂಟು ಹೊಂದಿದ್ದಾರೆ. ವಿಧಾನ ಸಭಾ ಕ್ಷೇತ್ರದ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಂಡಿದ್ದರು.

# ಈ ಭಾರಿಯ ದಸರಾ ಉದ್ಘಾಟನೆಗೆ ಹಂಸಲೇಖ



ಬೆಂಗಳೂರು, ಆ.29 - ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ನಾಡಿನ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರು ಈ ಬಾರಿ ಉದ್ಘಾಟಿಸಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.

ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿಗಳನ್ನು ಜಾರಿ ಮಾಡುವುದು ಸವಾಲು ಎನಿಸಲಿಲ್ಲ. ಆದರೆ ನಮ್ಮ ಸರ್ಕಾರಕ್ಕೆ ಅವುಗಳನ್ನು ಜಾರಿ ಮಾಡಬೇಕೆಂಬ ರಾಜಕೀಯ ಇಚ್ಛಾಶಕ್ತಿ ಇತ್ತು ಎಂದರು.

ವಿರೋಧ ಪಕ್ಷಗಳು ಹಾಗೂ ದೇಶದ ಪ್ರಧಾನಿಗಳೇ ಗ್ಯಾರಂಟಿ ಅನುಷ್ಠಾನವಾದರೆ ರಾಜ್ಯ ದಿವಾಳಿಯಾಗುತ್ತದೆ ಎಂದು ಹೇಳಿದ್ದರು. ಆದರೆ ನಾವು ಯಶಸ್ವಿಯಾಗಿ 5 ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ. ಇದಲ್ಲದೆ ಪ್ರಣಾಳಿಕೆಯಲ್ಲಿ ಹೇಳಿರುವ 76 ಕಾರ್ಯಕ್ರಮಗಳನ್ನು ಜಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ.

ಮೇ 9 ರಂದು ಚುನಾವಣೆಯ ಹಿಂದಿನ ದಿನ ನಾನು ಮತ್ತು ಡಿ.ಕೆ.ಶಿವಕುಮಾರ್ ಅವರು ಗ್ಯಾರಂಟಿ ಕಾರ್ಡುಗಳನ್ನು ಚಾಮುಂಡೇಶ್ವರಿ ತಾಯಿ ಸನ್ನಿಧಿಯಲ್ಲಿ ಪೂಜೆ ಮಾಡಿ ವಿತರಿಸಿದ್ದೆವು.

ನಾಳೆ ಐದು ಗ್ಯಾರಂಟಿಗಳಲ್ಲಿ ಪ್ರಮುಖ ವಾದ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ದೊರೆಯುತ್ತಿದೆ.

ರಾಜ್ಯಸಭಾ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಂಸದ ರಾಹುಲ್ ಗಾಂಧಿ ಅವರ ಸಮ್ಮುಖದಲ್ಲಿ ಚಾಲನೆ ನೀಡಲಾಗುತ್ತಿದೆ. ನಾಳೆ ನಡೆಯುತ್ತಿರುವುದು ಸರ್ಕಾರಿ ಕಾರ್ಯಕ್ರಮ. ಆ ಮೂಲಕ 1.10 ಲಕ್ಷ ಕುಟುಂಬಗಳ ಯಜಮಾನಿಯರಿಗೆ 2000 ರೂ. ಪ್ರತಿ ತಿಂಗಳು ನೀಡಲಾಗುತ್ತದೆ.

ಕೇಂದ್ರ ಸರ್ಕಾರ ಆಹಾರ ಪದಾರ್ಥಗಳ ಬೆಲೆ ಏರಿಕೆ ಮತ್ತು ಹಣದುಬ್ಬರ ತಡೆಯಲು ವಿಫಲವಾಗಿದೆ. ಸಾಮಾನ್ಯ ಜನರು, ಮಧ್ಯಮ ವರ್ಗದವರು ಮತ್ತು ಬಡ ಕುಟುಂಬದವರಿಗೆ ಆರ್ಥಿಕವಾಗಿ ಸಹಾಯ ಮಾಡಲು ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ.

ಒಂದು ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ 4-6 ಸಾವಿರ ರೂ.ಗಳು ದೊರೆಯಲಿವೆ. ಬಡವರ ಬಳಿ ಹಣವಿದ್ದರೆ ಮಾತ್ರ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುತ್ತವೆ. ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಯೋಜನೆ ಈಗಾಗಲೇ ಚಾಲನೆಗೆ ಬಂದಿದೆ. ನಾಳೆ ಗೃಹಜ್ಯೋತಿ ಪ್ರಾರಂಭವಾಗಲಿದೆ.

ಗೃಹಲಕ್ಷ್ಮಿಯ ರೀತಿ ದೇಶದಲ್ಲಿಯೇ ಒಂದೇ ಯೋಜನೆಗೆ ಇಷ್ಟೊಂದು ಹಣ ಖರ್ಚು ಮಾಡುತ್ತಿರುವ ಬೇರೆ ಯಾವ ಯೋಜನೆಯೂ ಇಲ್ಲ. 1.10 ಕೋಟಿ ಕಾರ್ಡ್‌ಗಳನ್ನು ಹಂಚಿ, ಡಿಬಿಟಿ ಮೂಲಕ ಅವರ ಖಾತೆಗೆ ಹಣವನ್ನು ವರ್ಗಾಯಿಸಲಾಗುವುದು ಎಂದು ತಿಳಿಸಿದ್ದಾರೆ.

# ಕಾನೂನು ಕೋರ್ಸ್‌ಗಳಿಗೆ ಯುವಕ-ಯುವತಿಯರ ಸೇರ್ಪಡೆ ಸ್ವಾಗತಾರ್ಹ

## ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ



ದಾವಣಗೆರೆ, ಆ.29- ನ್ಯಾಯಾಧೀಶರು ಅತ್ಯುತ್ತಮ ಮತ್ತು ಗುಣಾತ್ಮಕವಾದ ತೀರ್ಪು ನೀಡುವ ಸಾಮರ್ಥ್ಯ ಮತ್ತು ಅವಕಾಶ ಹೊಂದಿರುತ್ತಾರೆ. ಇದು ನ್ಯಾಯಾಧೀಶರ ಹುದ್ದೆಯ ಮಹತ್ವವಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಹೇಳಿದರು.

ನಗರದ ವಕೀಲರ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾ ವಕೀಲರ ಸಂಘದ ವತಿಯಿಂದ ಇಂದು ಏರ್ಪಾಡಾಗಿದ್ದ, ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡಿರುವ ವಕೀಲರಾದ ಹೆಚ್.ಎಸ್. ಕಾವ್ಯಶ್ರೀ ಅವರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾಲಕ್ಕೆ ಹೋಲಿಕೆ ಮಾಡಿದರೆ ಈಗ ನ್ಯಾಯಾಂಗ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳಿದ್ದು, ಯಾವುದೇ ರಾಜ್ಯದಲ್ಲಿ ನೋಡಿದರು ಶೇ. 40 ರಷ್ಟು ನ್ಯಾಯಾಧೀಶರು ಮಹಿಳೆಯರಾಗಿದ್ದಾರೆ ಎಂದರು.

ಅತ್ಯಂತ ಸ್ಪರ್ಧಾತ್ಮಕ ಪ್ರತಿಭಾನ್ವಿತ, ಬುದ್ಧಿವಂತಿಕೆ ಹೊಂದಿರುವ ಯುವಕ-ಯುವತಿಯರು ಕಾನೂನು ಕೋರ್ಸ್‌ಗಳಿಗೆ ಸೇರ್ಪಡೆಯಾಗುತ್ತಿರುವುದು ಸ್ವಾಗತಾರ್ಹ ಎಂದು ತಿಳಿಸಿದರು.

ವಕೀಲರಾದ ಕಾವ್ಯಶ್ರೀ ನ್ಯಾಯಾಧೀಶರಾಗಿ ನೇಮಕಗೊಂಡು ನ್ಯಾಯಾಧೀಶರ ಬಳಗಕ್ಕೆ ಸೇರ್ಪಡೆಯಾಗಿರುವುದು ಸ್ವಾಗತಾರ್ಹ ಎಂದರು.

ಹಿರಿಯ ನ್ಯಾಯವಾದಿ ರಾಮಚಂದ್ರ ಕಲಾಲ್ ಮಾತನಾಡಿ, ಕಠಿಣ ಪರಿಶ್ರಮ, ಭಾಷೆ ಮೇಲಿನ ಹಿಡಿತ ಮತ್ತು ನಿರಂತರ ಓದಿನ ಮೂಲಕ ವಕೀಲರು ತಮ್ಮ ಪಾಂಡಿತ್ಯವನ್ನು ಸಾಬೀತುಪಡಿಸಲು ಅವಕಾಶಗಳಿದ್ದು, ಕಾವ್ಯಶ್ರೀ ತಮ್ಮ ನಿರಂತರ ಪರಿಶ್ರಮದ ಮೂಲಕ ಮತ್ತು ವೃತ್ತಿಯಲ್ಲಿ ಗಂಭೀರವಾಗಿ ತೊಡಗಿಸಿಕೊಳ್ಳುವ ಮೂಲಕ ಸಿವಿಲ್ ಜಡ್ಜ್ ಹುದ್ದೆಗೆ ಆಯ್ಕೆಯಾಗಿದ್ದಾರೆ. ಅವರ ವೃತ್ತಿ ಜೀವನ ಯಶಸ್ವಿಯಾಗಲಿ ಎಂದು ಶುಭ ಕೋರಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಹೆಚ್.ಎಸ್. ಕಾವ್ಯಶ್ರೀ ಅವರು, ತಮ್ಮ ಹಿರಿಯ ವಕೀಲರು ಹಾಗೂ ಜಿಲ್ಲಾ ವಕೀಲರ ಸಂಘವು ತಮಗೆ ನೀಡಿದ ಸಹಕಾರವನ್ನು ಸ್ಮರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ವಕೀಲರು ತಮ್ಮ ಪ್ರತಿಭೆಯ ಮೂಲಕ ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗಗಳಲ್ಲಿ ಅವಕಾಶಗಳನ್ನು ಪಡೆದು ಜಿಲ್ಲಾ ವಕೀಲರ ಸಂಘದ ಘನತೆ ಮತ್ತು ಗೌರವವನ್ನು ಹೆಚ್ಚಿಸಿದರೆ ನೂತನವಾಗಿ ನ್ಯಾಯಾಧೀಶರಾಗಿ ಆಯ್ಕೆಯಾಗಿರುವ ಕಾವ್ಯಶ್ರೀ ಅವರು ವಕೀಲಿ ವೃತ್ತಿಯ ಜೊತೆಗೆ ರಂಗಭೂಮಿ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ತಿಳಿಸಿ ಅವರು ತಮ್ಮ ವೃತ್ತಿ ಜೀವನದಲ್ಲಿ ಯಶಸ್ವಿ ಪಡೆಯಲಿ ಎಂದು ಅಭಿನಂದಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣನವರ್, ನ್ಯಾಯಾಧೀಶರಾದ ಶಿವಪ್ಪ ಸಲಗೆರೆ, ರೇಷ್ಮಾ, ಅಫ್ತಾಬ್, ಸಮೀರ್ ಕೊಳ್ಳಿ, ಮಲ್ಲಿಕಾರ್ಜುನ್, ಸಿದ್ಧರಾಜು, ನಾಜಿಯಾ ಕೌಸರ್, ಜಿಲ್ಲಾ ವಕೀಲರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಮಧುಸೂದನ್, ಎಲ್. ನಾಗರಾಜ್, ನೀಲಕಂಠಯ್ಯ, ಸಂತೋಷ್‌ಕುಮಾರ್, ವಾಗೀಶ್ ಕಟಗಿಹಳ್ಳಿಮಠ, ಚೌಡಪ್ಪ, ಉಪಸ್ಥಿತರಿದ್ದರು.

ವಕೀಲರಾದ ನಿಶ್ಚಿತ ಪ್ರಾರ್ಥಿಸಿದರು. ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್ ಸ್ವಾಗತಿಸಿದರು, ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್ ವಂದಿಸಿದರು. ಕಾರ್ಯದರ್ಶಿ ಎಸ್. ಬಸವರಾಜ್ ನಿರೂಪಿಸಿದರು.

# ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆ ತಂದವರು ಕಾಂಗ್ರೆಸ್‌ನವರು



ದಾವಣಗೆರೆ, ಆ. 29- ಸ್ಮಾರ್ಟ್ ಸಿಟಿ ಯೋಜನೆಯನ್ನು ಜಾರಿಗೆ ತಂದವರು ಕಾಂಗ್ರೆಸ್ ಪಕ್ಷದವರೇ ಹೊರತು, ಬಿಜೆಪಿಯವರಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ನಾವೇ ಸ್ಮಾರ್ಟ್ ಸಿಟಿ ಯೋಜನೆ ತಂದವರು ಎಂದು ಹೇಳುವುದು ಎಷ್ಟು ಸರಿ. ಆಗ ದಾವಣಗೆರೆ 9ನೇ ಸ್ಥಾನದಲ್ಲಿತ್ತು. ಈಗ ಎಲ್ಲಿದೆ ಎಂದು ಅವಲೋಕಿಸಬೇಕಾಗಿದೆ ಎಂದು ಕಿಡಿಕಾರಿದರು.

'ಕೋತಿ ಮೊಸರನ್ನ ತಿಂದು ಮೇಕೆ ಮೂತಿಗೆ ಒರೆಸಿದಂತೆ' ಸಂಸದ ಸಿದ್ದೇಶ್ವರರ ಹೇಳಿಕೆಯಾಗಿದೆ. ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ನನಗೆ ಮೊದಲಿನಿಂದಲೂ ಪರಿಚಯ. ಚೌಕಿಪೇಟೆಯಲ್ಲಿ ಅಂಗಡಿ ಇಟ್ಟಿದ್ದರು. ಅಂದಿನಿಂದಲೂ ಅವರ ಅಂಗಡಿಗೆ ಹೋಗುತ್ತಿದ್ದೆವು. ನಮ್ಮ ಸಂಬಂಧಿಕರೂ ಕೂಡ. ಅವರನ್ನು ಅಂದಿನಿಂದಲೂ ಬಲ್ಲೆ. ಸಿದ್ದೇಶ್ವರರು ಸಹ ಸಂಬಂಧಿಕರು. ಆದರೆ ರವೀಂದ್ರನಾಥ್ ಅವರಿಗೂ - ಇವರಿಗೂ ಬಹಳ ವ್ಯತ್ಯಾಸವಿದೆ. ರವೀಂದ್ರನಾಥ್ ಮಾತಿನ ತೂಕವೇ ಬೇರೆ. ಅವರ ಆರೋಗ್ಯ ಸರಿ ಇಲ್ಲದಿದ್ದರೂ ಕೆಲಸ ಮಾಡಿದ್ದಾರೆ. ಅವರ ಬಗ್ಗೆ ಗೌರವ ಕೂಡ ಇದೆ ಎಂದರು.


ಸಂಸದರು ಸ್ಮಾರ್ಟ್ ಸಿಟಿ ಯೋಜನೆಯಡಿ ಏನು ಮಾಡಿದ್ದಾರೆಂದು ಎಲ್ಲರಿಗೂ ಗೊತ್ತು. ಎಲ್ಲಾ ಹಣವನ್ನು ಅವರ ಕಾಲೇಜು ರಸ್ತೆಗೆ ಹಾಕಿರಬೇಕು. ಕೊರೊನಾ ಸಂದರ್ಭದಲ್ಲಿ ಏನೇನು ಮಾಡಿದ್ದಾರೆಂದು ಗೊತ್ತಿಲ್ಲ. ಎಲ್ಲಾ ಹಣ ದುರ್ಬಳಕೆ ಮಾಡಿಕೊಂಡು ಈಗ ರವೀಂದ್ರನಾಥ್, ರೇಣುಕಾಚಾರ್ಯ, ಮಾಡಾಳು ವಿರೂಪಾಕ್ಷಪ್ಪ ಅವರ ಮೇಲೆ ಹಾಕುತ್ತಿದ್ದಾರೆ. ನಾನೇನೂ ಮಾಡಿಲ್ಲ ಎಂದು ಆಣೆ-ಪ್ರಮಾಣ ಮಾಡಲಿ ಎಂದು ತಾಕೀತು ಮಾಡಿದರು.

ರೇಣುಕಾಚಾರ್ಯ ಮೊದಲ ಬಾರಿಗೆ ನಮ್ಮ ಮನೆಗೆ ಬಂದಿದ್ದರಿಂದ ಅವರನ್ನು ಗೌರವಯುತವಾಗಿ ಮಾತನಾಡಿಸಿ ಕಳಿಸಿದ್ದೇವೆ ಅಷ್ಟೇ. ಪಕ್ಷದ ಆಂತರಿಕ ವಿಚಾರ ನನಗೆ ಗೊತ್ತಿಲ್ಲ. ಯಾವ ಮಾಜಿ ಶಾಸಕರೂ ಸಹ ಸಂಪರ್ಕದಲ್ಲಿ ಇಲ್ಲ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ಬಡವರ ಕಣ್ಣೀರು ಒರೆಸುವಂತಹ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ನಾಳೆ ಬುಧವಾರ ಮೈಸೂರಿನಲ್ಲಿ 'ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆಗೆ ರಾಹುಲ್ ಗಾಂಧಿ ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದ ನೇರ ಪ್ರಸಾರದ ವ್ಯವಸ್ಥೆಯನ್ನು ಸಹ ಮಾಡಲಾಗಿದೆ ಎಂದರು.

ಕೇಂದ್ರ ಸರ್ಕಾರ ಬೆಲೆ ಏರಿಕೆ ನಿಯಂತ್ರಣ ಮಾಡುವಲ್ಲಿ ವಿಫಲವಾಗಿದೆ. ನಮ್ಮ ಸರ್ಕಾರದಲ್ಲಿನ ಬೆಲೆಗಳಿಗೂ ಈಗಿರುವ ಬೆಲೆಗಳನ್ನು ನೋಡಿದರೆ ಗೊತ್ತಾಗುತ್ತದೆ ಎಂದು ಹೇಳಿದರು.

# ನಗರದಲ್ಲಿ ಇಂದಿನಿಂದ ಶ್ರೀ ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವ



ಕೆ.ಬಿ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಇಂದಿನಿಂದ ಬರುವ ಸೆಪ್ಟೆಂಬರ್ 2ರ ಶನಿವಾರದವರೆಗೆ 4 ದಿನಗಳ ಕಾಲ ಶ್ರೀ ಗುರುರಾಯರ 352ನೇ ಆರಾಧನಾ ಮಹೋತ್ಸವ ಜರುಗಲಿದೆ.

ಇಂದು ಸಂಜೆಯಿಂದ ಧ್ವಜಾ ರೋಹಣ, ಗೋಪೂಜೆ, ಧಾನ್ಯಪೂಜೆ, ರಥೋತ್ಸವ ಕಾರ್ಯಕ್ರಮಗಳು ಜರುಗಲಿದ್ದು, ಧ್ವಜಾರೋಹಣ ಕಾರ್ಯವನ್ನು ಶ್ರೀಮಠದ ನಿರ್ದೇಶಕ ಹಾಗೂ ಹಿರಿಯ ವಕೀಲ ಜೆ.ಎನ್. ವಸಂತ ಕುಮಾರ್ ನೆರವೇರಿಸಲಿದ್ದಾರೆ.

ನಾಳೆ ಗುರುವಾರದಿಂದ ಮೂರು ದಿನಗಳ ಕಾಲ ಬೆಳಿಗ್ಗೆ 5 ಗಂಟೆಯಿಂದ ವಿವಿಧ ಧಾರ್ಮಿಕ ಕ್ರಿಯೆಗಳು ನಡೆಯಲಿದ್ದು, ಪಂಡಿತರುಗಳಿಂದ ಉಪನ್ಯಾಸ, ಹರಿವಾಯು ಸ್ತುತಿ ಪಾರಾಯಣ, ಶ್ರೀ ರಾಘವೇಂದ್ರ ಅಷ್ಟೋತ್ತರ, ಪಾರಾಯಣ ಇನ್ನಿತರೆ ಕಾರ್ಯಕ್ರಮಗಳು ನಡೆಯಲಿವೆ ಎಂದು ಸಂಘದ ಅಧ್ಯಕ್ಷ ಕೋ.ಸ. ಪ್ರಸನ್ನಕುಮಾರ್ ತಿಳಿಸಿದ್ದಾರೆ.

ನಾಳೆ ಗುರವಾರ ಸಂಜೆ 7 ರಿಂದ ಪೂರ್ವಾರಾಧನೆ, ದಾವಣಗೆರೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಮಾಧವಿ ಗೋಪಾಲಕೃಷ್ಣ ಮತ್ತು ಶಿಷ್ಯ ವೃಂದದವರಿಂದ ಭರತನಾಟ್ಯ ಕಾರ್ಯಕ್ರಮ, ಸೆ. 1ರ ಶುಕ್ರವಾರ ಮಧ್ಯಾರಾಧನೆ ಸಂಜೆ 7 ರಿಂದ ಹಿರಿಯ ಕಲಾವಿದರಾದ ವಿದ್ವಾನ್ ಶ್ರೀ ರಾಜಗೋಪಾಲ ಭಾಗವತ್ ಇವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಹಾಗೂ ದಿನಾಂಕ 2ರ ಶನಿವಾರ ಉತ್ತರಾರಾಧನೆ ಬೆಳಿಗ್ಗೆ 10.30ಕ್ಕೆ ರಾಜಬೀದಿಗಳಲ್ಲಿ ವೈಭವೋಪೇತವಾಗಿ ಶ್ರೀ ಗುರುರಾಯರ ಚಲ ಪ್ರತಿಮೆಯೊಂದಿಗೆ ಹಾಗು ರಾಘವೇಂದ್ರ ಸ್ವಾಮಿಗಳು ರಚಿಸಿರುವ ಪರಿಮಳ ಗ್ರಂಥದ ಮೆರವಣಿಗೆ, ವೇದ ಘೋಷ ಭಜನೆ, ನಾದಸ್ವರ, ಚಂಡೆಮೇಳಗಳೊಂದಿಗೆ ಜರುಗಲಿದೆ.

ಸಂಜೆ 7 ರಿಂದ ವಿದ್ವಾನ್ ವಿಶ್ವಂಭರ ಮತ್ತು ಸಂಗಡಿಗರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೋವಿಡ್ ಕಾರಣದಿಂದಾಗಿ ಶ್ರೀ ಗುರುರಾಯರ ಆರಾಧನೆಯನ್ನು ಸರಳವಾಗಿ ಆಚರಿಸಲಾಗಿತ್ತು. ಈ ಬಾರಿ ಶ್ರೀ ಗುರುರಾಯರ ಆರಾಧನಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಶ್ರೀ ಗುರುರಾಜ ಸೇವಾ ಸಂಘದ ಅಧ್ಯಕ್ಷ ಕೋಸ ಪ್ರಸನ್ನಕುಮಾರ್ ತಿಳಿಸಿದರು.

## ಮಲೇಬೆನ್ನೂರಿನಲ್ಲಿ ಇಂದು ಕಳಸಾರೋಹಣ

ಪೇಟೆ ಬೀದಿಯಲ್ಲಿರುವ ಮೂಲ ಬಸವೇಶ್ವರ ದೇವಸ್ಥಾನದ ನೂತನ ಗೋಪುರ ಉದ್ಘಾಟನೆ ಮತ್ತು ಕಳಸಾರೋಹಣ ಇಂದು ಬೆಳಿಗ್ಗೆ 9 ಗಂಟೆಗೆ ರಟ್ಟಿಹಳ್ಳಿ ಕಬ್ಬಿಣ ಕಂಥಿಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 12 ಗಂಟೆಯಿಂದ ಅನ್ನ ಸಂತರ್ಪಣೆ ನಡೆಯಲಿದೆ.

## ಹಾವೇರಿ : ಪಟಾಕಿ ಗೋದಾಮಿನಲ್ಲಿ ಅಗ್ನಿ ಅವಘಡ, ನಾಲ್ವರ ಸಾವು



ಹಾವೇರಿ, ಆ. 29 - ಜಿಲ್ಲೆಯ ಆಲದಕಟ್ಟಿ ಗ್ರಾಮದ ಪಟಾಕಿ ಗೋದಾಮಿನಲ್ಲಿ ಸಂಭವಿಸಿದ ಭಾರೀ ಅಗ್ನಿ ಅವಘಡದಲ್ಲಿ ನಾಲ್ವರು ಕಾರ್ಮಿಕರು ಸಜೀವ ದಹನವಾಗಿದ್ದು, ಗೋದಾಮಿನ ಪಕ್ಕದಲ್ಲಿದ್ದ ಮಹಿಳೆ ಸೇರಿದಂತೆ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಹಾವೇರಿ ಹೊರವಲಯದ ಆಲದಕಟ್ಟಿ ಗ್ರಾಮದಲ್ಲಿ ಕುಮಾರ್ ಎಂಬುವವರಿಗೆ ಸೇರಿದ ಭೂಮಿಕಾ ಪಟಾಕಿ ಗೋದಾಮಿನಲ್ಲಿ ಈ ದುರಂತ ಸಂಭವಿಸಿದ್ದು, ಸುಮಾರು ಒಂದು ಕೋಟಿಗೂ ಹೆಚ್ಚು ಮೌಲ್ಯದ ಪಟಾಕಿ ದಾಸ್ತಾನು ಮಾಡಲಾಗಿತ್ತು ಎನ್ನಲಾಗಿದೆ.

ಮೃತರನ್ನು ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ ಕಾಟೇನಹಳ್ಳಿ ಗ್ರಾಮದ 45 ವರ್ಷದ ದ್ಯಾಮಪ್ಪ ಓಲೇಕಾರ, 28 ವರ್ಷದ ರಮೇಶ್ ಬಾರ್ಕಿ, 28 ವರ್ಷದ ಶಿವಲಿಂಗ ಅಕ್ಕಿ ಮತ್ತು 45 ವರ್ಷದ ಜಯಣ್ಣ ಎಂದು ಗುರುತಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೃತರ ಕುಟುಂಬಸ್ಥರಿಗೆ ತಲಾ ಐದು ಲಕ್ಷ ರೂ. ಪರಿಹಾರ ಘೋಷಣೆ ಮಾಡಿದ್ದಾರೆ.

ವೆಲ್ಡಿಂಗ್ ಕೆಲಸಕ್ಕೆ ಬಂದಿದ್ದ ಹರಿಹರ ತಾಲ್ಲೂಕಿನ ತೆಗ್ಗಿನಕೆರೆ ನಿವಾಸಿ ವಾಸಿಂ ಶಫಿ ಅಹಮದ್ (32) ಬೆಂಕಿಯ ಕೆನ್ನಾಲಿಗೆಯಿಂದ ತಪ್ಪಿಸಿಕೊಳ್ಳಲು ಗೋದಾಮಿನ ಮೊದಲ ಮಹಡಿಯಿಂದ ಕೆಳಕ್ಕೆ ಜಿಗಿದ ಪರಿಣಾಮ ಬೆನ್ನು ಮೂಳೆ ಮುರಿದುಕೊಂಡು ಪ್ರಜ್ಞೆ ತಪ್ಪಿ ಬಿದ್ದಿದ್ದರು. ಗಾಯಗೊಂಡಿದ್ದ ವಾಸಿಂ ಮತ್ತು ಶೇರು ಮಾಳಪ್ಪ ಕಟ್ಟಿಮನಿ ಈ ಇಬ್ಬರನ್ನೂ ದಾವಣಗೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಗೋದಾಮಿನ ಸಮೀಪದಲ್ಲಿದ್ದ ಮನೆಯ ನಿವಾಸಿ ಕಲಾವತಿ ಎಂಬುವವರು ವಾತಾವರಣದಲ್ಲಿ ಹರಡಿದ ಹೊಗೆಯಿಂದ ಅಸ್ವಸ್ಥರಾಗಿ ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಅಡುಗೆ ಅನಿಲ ಬೆಲೆ ಇಳಿಕೆ

**(1ನೇ ಪುಟದಿಂದ)** ಅಂದಾಜಿಸಲಾಗಿದೆ. ಉಳಿದ ಗ್ರಾಹಕರಿಗೆ ಎಷ್ಟು ವೆಚ್ಚವಾಗಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ದೇಶದಲ್ಲಿ ಒಟ್ಟು 31 ಕೋಟಿ ಸಿಲಿಂಡರ್ ಬಳಕೆದಾರರಿದ್ದಾರೆ. ಈ ಪೈಕಿ 9.6 ಕೋಟಿ ಉಜ್ವಲ ಗ್ರಾಹಕರಿದ್ದಾರೆ. ಜೂನ್ 2020ರಲ್ಲಿ ಕೇಂದ್ರ ಸರ್ಕಾರ ಅಡುಗೆ ಅನಿಲದ ಸಬ್ಸಿಡಿ ಇಳಿಕೆ ಮಾಡಿತ್ತು. ನಂತರದಲ್ಲಿ ಮಾರುಕಟ್ಟೆ ದರದಲ್ಲಿ ಅಡುಗೆ ಅನಿಲ ಸಿಲಿಂಡರ್ ಪೂರೈಕೆ ಮಾಡಲಾಗುತ್ತಿದೆ. ಉಜ್ವಲ ಬಳಕೆದಾರರಿಗೆ ಮಾತ್ರ 200 ರೂ. ಸಬ್ಸಿಡಿ ನೀಡಲಾಗುತ್ತಿತ್ತು. ಆ ಸಬ್ಸಿಡಿ ಈಗ 400 ರೂ.ಗಳಿಗೆ ಹೆಚ್ಚಳವಾಗಿದೆ.

## ಜಿಗಳಿಯಲ್ಲಿ ಗೃಹಲಕ್ಷ್ಮಿ

ಜಿಗಳಿ ಗ್ರಾ.ಪಂ. ವತಿಯಿಂದ ಇಂದು ಬೆಳಿಗ್ಗೆ 10.30ಕ್ಕೆ ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಕಾರ್ಯಕ್ರಮವನ್ನು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ಮತ್ತು ನೋಡಲ್ ಅಧಿಕಾರಿ ಬಿಇಓ ಹನುಮಂತಪ್ಪ ಅವರ ಮಾರ್ಗದರ್ಶನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪಿಡಿಓ ಉಮೇಶ್ ತಿಳಿಸಿದ್ದಾರೆ.

## ಕಾಲುವೆಗೆ ಜಾರಿ ಬಿದ್ದು ಯುವಕನ ಸಾವು

ಹೊನ್ನಾಳಿ, ಆ.29- ಸೊರಟೂರಿನ ಮಂಜುನಾಥ (26) ಸಮೀಪದ ತುಂಗಾ ನಾಲೆಗೆ ಇಂದು ಮಧ್ಯಾಹ್ನ ಎತ್ತು ಮೈ ತೊಳೆಯಲು ಹೋಗಿದ್ದಾಗ ಆಕಸ್ಮಿಕವಾಗಿ ಕಾಲು ಜಾರಿ ಕಾಲುವೆಗೆ ಬಿದ್ದು ಮೃತ ಪಟ್ಟಿದ್ದಾನೆ.

ಮೂಲತಃ ರಟ್ಟೆಹಳ್ಳಿ ಗ್ರಾಮದ ಯುವಕ ಮಂಜುನಾಥ ಬಹುದಿನಗಳಿಂದ ತನ್ನ ಅಜ್ಜಿಯ ಮನೆಯಲ್ಲಿದ್ದು, ಕೂಲಿ ಕೆಲಸ ಮಾಡಿಕೊಂಡಿದ್ದ ಎನ್ನಲಾಗಿದ್ದು, ಮೃತ ಯುವಕ ಮಂಜುನಾಥ ಅವರ ತಂದೆ ಶಿವಾಜಿರಾವ್ ಅವರು ಪೊಲೀಸ್ ಠಾಣೆಗೆ ದೂರು ನೀಡಿದ್ದು, ದೂರಿನನ್ವಯ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಹೊನ್ನಾಳಿ ಪೊಲೀಸ್ ಇನ್‌ಸ್ಪೆಕ್ಟರ್ ಸಿದ್ದೇಗೌಡ ತಿಳಿಸಿದ್ದಾರೆ.

## ಸಿಲಿಂಡರ್ ದರ ಇಳಿಕೆ ರಕ್ಷಾ ಬಂಧನ ಕೊಡುಗೆ: ಸಂಸದ ಸಿದ್ದೇಶ್ವರ

ದಾವಣಗೆರೆ, ಆ. 29- ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಗೃಹೋಪಯೋಗಿ ಸಿಲಿಂಡರ್ ದರವನ್ನು 200 ರೂ.ಗಳಿಗೆ ಇಳಿಸುವ ಮೂಲಕ ದೇಶದ ಮಹಿಳೆಯರಿಗೆ ರಕ್ಷಾ ಬಂಧನದ ಉಡುಗೊರೆ ನೀಡಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಪ್ರಧಾನ ಮಂತ್ರಿ ಉಜ್ವಲ ಯೋಜನೆಯಡಿ ಸಂಪರ್ಕ ಪಡೆದವರಿಗೆ ಈಗಿರುವ ಸಬ್ಸಿಡಿ 200 ರೂ. ಜೊತೆಗೆ ಹೆಚ್ಚುವರಿ 200 ರೂಪಾಯಿ ಸಬ್ಸಿಡಿ ಸೇರಿ ಒಟ್ಟು ಪ್ರತಿ ಸಿಲಿಂಡರ್‌ಗೆ 400 ರೂಪಾಯಿ ಇಳಿಕೆಯಾಗಲಿದೆ.

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಸುಮಾರು 5 ಲಕ್ಷ ಗೃಹೋಪಯೋಗಿ ಎಲ್.ಪಿ.ಜಿ. ಸಂಪರ್ಕ ಪಡೆದ ಗ್ರಾಹಕರಿಗೆ ಈ ಲಾಭ ದೊರೆಯಲಿದೆ. ಇದರಲ್ಲಿ ಸುಮಾರು 1 ಲಕ್ಷಕ್ಕೂ ಹೆಚ್ಚು ಉಜ್ವಲಾ ಯೋಜನೆ ಬಳಕೆದಾರರಿದ್ದಾರೆ ಎಂದರು. 2014 ರಲ್ಲಿ 14.5 ಕೋಟಿ ಗೃಹೋಪಯೋಗಿ ಗ್ಯಾಸ್ ಸಂಪರ್ಕ ಪಡೆದ ಫಲಾನುಭವಿಗಳಿದ್ದರು. ಈ ಸಂಖ್ಯೆ ಈಗ 33 ಕೋಟಿಗೆ ತಲುಪಿದೆ. ಇದರಲ್ಲಿ ಸುಮಾರು 9.60 ಕೋಟಿ ಉಜ್ವಲಾ ಫಲಾನುಭವಿಗಳಿದ್ದಾರೆ. ಕೇಂದ್ರ ಸರ್ಕಾರದ ಸಚಿವ ಸಂಪುಟದಲ್ಲಿ ಇನ್ನೂ ಹೆಚ್ಚುವರಿ 75 ಲಕ್ಷ ಉಜ್ವಲಾ ಸಂಪರ್ಕಗಳನ್ನು ದೇಶದ್ಯಾಂತ ಕಲ್ಪಿಸಲು ಅನುಮೋದನೆ ನೀಡಲಾಗಿದೆ. ಒಟ್ಟಾರೆ ದರ ಇಳಿಕೆ ಮಾಡಿದ ಪ್ರಧಾನಮಂತ್ರಿಗಳನ್ನು ಹಾಗೂ ಇಂಧನ ಸಚಿವರನ್ನು ಅಭಿನಂದಿಸುವುದಾಗಿ ಸಂಸದರು ಹೇಳಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಗೃಹಲಕ್ಷ್ಮಿ ಯೋಜನೆ ಉದ್ಘಾಟನೆ

ಪುರಸಭೆ ವತಿಯಿಂದ ರಾಜ್ಯ ಸರ್ಕಾರದ ನಿರ್ದೇಶನದ ಮೇರೆಗೆ ಶಾದಿಮಹಲ್, ರೈತ ಭವನ ಮತ್ತು ಬಸವೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಕಾರ್ಯಕ್ರಮವನ್ನು ಮತ್ತು ಮೈಸೂರಿನಲ್ಲಿ ಜರುಗಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಲಿರುವ ಗೃಹಲಕ್ಷ್ಮಿ ಯೋಜನೆ ಕಾರ್ಯಕ್ರಮದ ನೇರಪ್ರಸಾರ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು - ನಾಳೆ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ

ದಾವಣಗೆರೆ ಮಹಾನಗರ ಪಾಲಿಕೆಯ ರಾಜನಹಳ್ಳಿ ಸಗಟು ನೀರು ಸರಬರಾಜು ಕೊಳವೆಯು ರಾಜನಹಳ್ಳಿ ಗ್ರಾಮದ ಹತ್ತಿರ ಒಡೆದಿದ್ದು, ದುರಸ್ಥಿ ಕಾರ್ಯ ನಿರ್ವಹಿಸಬೇಕಿರುವುದರಿಂದ ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ಇಂದು ಮತ್ತು ನಾಳೆ ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

## ಬಿ.ಕಲಪನಹಳ್ಳಿಯಲ್ಲಿಂದು

ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದಲ್ಲಿ ಇಂದು ಬೆಳಿಗ್ಗೆ 5.30 ಕ್ಕೆ ಮಹಾತ್ಮ ಶರಣ ಬಸವೇಶ್ವರರ ಶ್ರಾವಣ ಮಾಸದ ವಚನಾಭಿಷೇಕ ಮತ್ತು ಪೂಜಾ ಮಹೋತ್ಸವ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗವಿರುತ್ತದೆ.

**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,**
ನಂ. 307/9, ವಿದ್ಯಾರ್ಥಿ ಭವನ ಹತ್ತಿರ, ಹದಡಿ ರಸ್ತೆ, ದಾವಣಗೆರೆ - 577 002
ಫೋನ್ ನಂ. 99011 20124, 98447 36220

**ಪ್ರತಿಭಾ ಪುರಸ್ಕಾರ**

ಸಂಘವು 2022-23ನೇ ಸಾಲಿಗೆ ತನ್ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು, ಪುರಸ್ಕಾರವನ್ನು 2022-23ನೇ ಸಾಲಿನಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ತೇರ್ಗಡೆಯಾದ 10ನೇ ತರಗತಿಯ (SSLC State & CBSE Syllabus) 5 ಮಕ್ಕಳಿಗೆ ಹಾಗೂ 12ನೇ ತರಗತಿಯ (ಪಿಯುಸಿ) 5 ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡುತ್ತಿದ್ದು, ಸಂಘದ ಅರ್ಹ ಸದಸ್ಯರ ಮಕ್ಕಳು ತಮ್ಮ ನಕಲು ಅಂಕಪಟ್ಟಿಯೊಂದಿಗೆ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15.09.2023 ಆಗಿರುತ್ತದೆ. ಅರ್ಜಿಯ ನಮೂನೆಯನ್ನು ಸಂಘದ ಆಡಳಿತ ಕಛೇರಿಯಲ್ಲಿ ಪಡೆಯಬಹುದು.

ಆಯ್ಕೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ದಿನಾಂಕ 21.09.2023ರಂದು ದಾವಣಗೆರೆ - ಹರಿಹರ ಸಮುದಾಯ ಭವನ (ಕಲಾ ಪ್ರಕಾಶ ವೃಂದ), ಇಲ್ಲಿ ನಡೆಯುವ ಸಂಘದ 29ನೇ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನಿಸಲಾಗುವುದು.

ಸಹಿ/- ಆಡಳಿತ ಮಂಡಲಿ
ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ.

# ರೋಗಿಗಳಿಗೆ ಧೈರ್ಯ ತುಂಬಿ ಚಿಕಿತ್ಸೆ ನೀಡಬೇಕು



## ಮದರ್ ಥೆರೇಸಾ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್

ದಾವಣಗೆರೆ, ಆ. 29 – ನಗರದ ಸಿ.ಜಿ. ಆಸ್ಪತ್ರೆಯಲ್ಲಿರುವ ಸರ್ಕಾರಿ ಶುಶ್ರೂಷ ತರಬೇತಿ ಶಾಲೆ ಮತ್ತು ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಮದರ್ ಥೆರೇಸಾರ 113ನೇ ಜನ್ಮ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮದರ್ ಥೆರೇಸಾ ಸೇವಾ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಹಿರಿಯ ಶುಶ್ರೂಷ ಅಧಿಕಾರಿ ಸುವರ್ಣ ಬಿ. ಅಂಕಲಗಿ, ಶುಶ್ರೂಷ ಬೋಧಕಿ ಡಿ. ಸೌಭಾಗ್ಯಮ್ಮ ಹಾಗೂ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ಟಿ. ನಾಗರತ್ನ ಅವರಿಗೆ ಮದರ್ ಥೆರೇಸಾ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್, ರೋಗಿಗಳನ್ನು ಅತ್ಯಂತ ಪ್ರೀತಿ, ಕರುಣೆಯಿಂದ ನೋಡಬೇಕು. ಅವರಲ್ಲಿ ಭಯದ ಬದಲು ದಯೆಯನ್ನು ಹುಟ್ಟಿಸುವಂತಾಗಬೇಕು. ಯಾವ ರೋಗಿಯನ್ನು ಅವನ ಕಾಯಿಲೆಗನುಸಾರ ದೂರವಿಡುವುದು, ಅವನನ್ನು ಅಸಹ್ಯವಾಗಿ ಕಾಣುವುದು ಸೇವೆಯಲ್ಲ. ನಿಜವಾಗಲು ಅವನ ನೋವನ್ನು ಅರಿತು ಅವನೊಂದಿಗೆ ಪ್ರೀತಿಯಿಂದ ಮಾತನಾಡಿ, ಚಿಕಿತ್ಸೆ ಮಾಡಿ ಧೈರ್ಯ ತುಂಬಬೇಕು ಎಂದು ಹೇಳಿದರು.

ಕುಷ್ಠ, ಕ್ಷಯ ಹಾಗೂ ಏಡ್ಸ್ ರೀತಿಯ ರೋಗಗಳಿಗೆ ಗುರಿಯಾದವರಿಗೆ ಮದರ್ ಥೆರೇಸಾ ಅಪಾರ ನೆರವು ನೀಡಿದ್ದರು. ಕುಷ್ಠ ರೋಗಿಗಳನ್ನು ಸಮಾಜದಿಂದ ದೂರವಿಡುತ್ತಿದ್ದ ಕಾಲದಲ್ಲಿ, ರೋಗಿಗಳಿಗೆ ಸಾಂತ್ವನ ಹೇಳಿ ನೆರವು ನೀಡುತ್ತಿದ್ದರು ಎಂದು ಹೇಳಿದರು.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಸೇವೆಯೇ ಪರಮ ಧರ್ಮವಾಗಿದೆ. ಮದರ್ ಥೆರೇಸಾ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧೀಜಿ ಮತ್ತಿತರರು ಸಮಾಜ ಸೇವೆಯ ಮಹತ್ವ ಸಾರಿದ್ದಾರೆ. ಶುಶ್ರೂಷಕರು ಸೇವೆಯಲ್ಲಿ ತೊಡಗುವ ಅದೃಷ್ಟ ಪಡೆದಿದ್ದಾರೆ. ಸೇವೆಯನ್ನು ಸಂತೋಷದಿಂದ ಪಾಲಿಸಬೇಕು ಎಂದರು.

ನಿವಾಸಿ ವೈದ್ಯಾಧಿಕಾರಿ ಡಾ. ನಾಗೇಂದ್ರಪ್ಪ ಮಾತನಾಡಿ, ವೈದ್ಯ ಮತ್ತು ಶುಶ್ರೂಷಕರದ್ದು ಪವಿತ್ರ ವೃತ್ತಿ. ಶುಶ್ರೂಷಕರು ವೈದ್ಯ ಮತ್ತು ರೋಗಿಗಳಿಗೆ ಸೇತುವೆಯಾಗಿ ಕೆಲಸ ಮಾಡಬೇಕು. ಮುಗುಳ್ನಗೆಯೊಂದಿಗೆ ನಿಸ್ವಾರ್ಥದಿಂದ ಸೇವೆಗೈದಾಗ ನಮ್ಮ ಆತ್ಮವಿಶ್ವಾಸ ಹೆಚ್ಚುತ್ತದೆ ಎಂದರು.

ಕಾರ್ಯಕ್ರಮದಲ್ಲಿ ನಿವಾಸಿ ವೈದ್ಯಾಧಿಕಾರಿ ಡಾ. ನಾಗವೇಣಿ, ಶುಶ್ರೂಷ ಅಧೀಕ್ಷಕಿ ವರಲಕ್ಷ್ಮಿ ಬಿ. ಬಳ್ಳಾರಿ ಮತ್ತಿತರರು ಉಪಸ್ಥಿತರಿದ್ದರು. ಸರ್ಕಾರಿ ಶುಶ್ರೂಷ ತರಬೇತಿ ಶಾಲೆಯ ಪ್ರಾಂಶುಪಾಲೆ ಎಸ್. ನಳಿನಾಕ್ಷಿ ಅಧ್ಯಕ್ಷತೆ ವಹಿಸಿದ್ದರು.

ಎಂ.ಕೆ. ಇಂದಿರಮ್ಮ ಪ್ರಾರ್ಥಿಸಿದರು. ಡಿ. ಸೌಭಾಗ್ಯಮ್ಮ ಸ್ವಾಗತಿಸಿದರು. ಆರ್. ರಾಮಚಂದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ.ಕೆ. ಕುಮಾರ್ ವಂದಿಸಿದರು.

# ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ನೂಲು ಹುಣ್ಣಿಮೆ ವಿಶೇಷ ಪೂಜೆ



ದಾವಣಗೆರೆ, ಆ. 29- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 31ರ ಗುರುವಾರ ನೂಲು ಹುಣ್ಣಿಮೆ ಪ್ರಯುಕ್ತ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್. ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಆದಿಲಕ್ಷ್ಮಮ್ಮ ದಿ. ಶ್ರೀ ವಿ. ಸತ್ಯನಾರಾಯಣರಾವ್ ಹಾಗೂ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ಉತ್ತರಾಖಂಡದಲ್ಲಿ ಈ ವರ್ಷದಲ್ಲೇ ಏಕರೂಪ ನಾಗರಿಕ ಸಂಹಿತೆ

ಡೆಹರಾಡೂನ್, ಆ. 29 – ಉತ್ತರಾಖಂಡದಲ್ಲಿ ಈ ವರ್ಷ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದ್ದಾರೆ. ದೇಶಾದ್ಯಂತ ಏಕರೂಪ ಕಾನೂನು ಇರಬೇಕು. ಇದು ಜನರ ಬೇಡಿಕೆಯಾಗಿದೆ. ಉತ್ತರಾಖಂಡದಲ್ಲಿ ಈ ವರ್ಷದಲ್ಲೇ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲಾಗುವುದು ಎಂದವರು ತಿಳಿಸಿದ್ದಾರೆ. ಕಳೆದ ವರ್ಷ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲಾಗುವುದು ಎಂದು ಬಿಜೆಪಿ ಭರವಸೆ ನೀಡಿತ್ತು.


## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಮರಣ : 30.8.2021

**ಶ್ರೀಮತಿ ಅನ್ನಪೂರ್ಣಮ್ಮ**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,

ಶ್ರೀ ಬೂಸ್ನೂರು ವೀರಣ್ಣ ಮತ್ತು ಸಹೋದರರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಬೂಸ್ನೂರು ಬಂಧು-ಮಿತ್ರರು

ಪ್ರಕಾಶ ಪ್ರಿಂಟಿಂಗ್ ಪ್ರೆಸ್, ಚಾಮರಾಜಪೇಟೆ, ದಾವಣಗೆರೆ.

ಮೊ : 98867 51091



## VISHWARADHYA

CANCER HOSPITAL & RESEARCH INSTITUTE

P.B.Road, Avaragere, Bada Cross, Davanagere.

We are Hiring Join our Team open Positions



- Duty Doctors
- Marketing (PRO)
- Insurance
- Counsellor
- Nurses

Qualification

- Have Experience in the Field
- Able to Speak English
- Great Communication Skill
- B.Com, MBA

Send your CV

vishwaradhyacancerhospital2019@gmail.com

Contact: 94806 96842


# ಪೊಲೀಸ್ ಇಲಾಖೆಯಿಂದ ಜನಸ್ನೇಹಿ ಸೇವೆ

## ಹರಿಹರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್



ಹರಿಹರ, ಅ. 29 - ಪೊಲೀಸ್ ಇಲಾಖೆ ಸಾರ್ವಜನಿಕ ಸಮಸ್ಯೆಗಳನ್ನು ಪರಿಹರಿಸಲು ಜನಸ್ನೇಹಿಯಾಗಿ ಸೇವೆ ನೀಡುತ್ತದೆ ಎಂದು ದಾವಣಗೆರೆ ಜಿಲ್ಲಾ ನೂತನ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ನಗರದ ಪೊಲೀಸ್ ಠಾಣೆಗೆ ಆಗಮಿಸಿ ಸಿಬ್ಬಂದಿಗಳ ಕಾರ್ಯವೈಖರಿ ಪರಿಶೀಲನೆ ನಡೆಸಿ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಹರಿಹರದಲ್ಲಿ ಬಹಳ ಮುಖ್ಯವಾಗಿ ಶಾಲಾ ವಲಯಗಳಲ್ಲಿ ಟ್ರಾಫಿಕ್ ಸಮಸ್ಯೆ ಮತ್ತು ಸಂಚಾರಿ ಪೊಲೀಸ್ ಠಾಣೆ ಹಾಗೂ ಸಿ.ಸಿ. ಕ್ಯಾಮರಾ ಅಳವಡಿಕೆ ಬಗ್ಗೆ ಗಮನ ಹರಿಸಲಾಗುವುದು ಎಂದು ಹೇಳಿದರು.

ನಗರದ ಬಸ್ ನಿಲ್ದಾಣಕ್ಕೆ ಪ್ರತಿನಿತ್ಯ 1400 ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಬಸ್ ಗಳು ಬರುತ್ತಿವೆ. ಇಲ್ಲಿಗೆ ಬರುವ ಪ್ರಯಾಣಿಕರ ಸುರಕ್ಷತೆ ಬಗ್ಗೆ ಗಮನ ಹರಿಸಲಾಗುವುದು. ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಗಳಿಗೆ ತೊಂದರೆಯಾಗುವುದನ್ನು ತಡೆಯಲು ಹೆಚ್ಚಿನ ಭದ್ರತೆ ಕಲ್ಪಿಸಲಾಗುವುದು ಎಂದರು.

ಮರಳು ಮತ್ತು ಇಟ್ಟಿಗೆ ವ್ಯವಹಾರ ವಹಿವಾಟಿನ ವಿಚಾರಗಳು ಕೇವಲ ಪೊಲೀಸ್ ಇಲಾಖೆಗೆ ಒಂದೇ ಸಂಬಂಧಿಸಿದ್ದಲ್ಲ. ಇದರಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಡಿಯಲ್ಲಿ ಬರುವ ಅಧಿಕಾರಿಗಳ ಕರ್ತವ್ಯವೂ ಮುಖ್ಯ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ನಗರದಲ್ಲಿ ಸಿಬ್ಬಂದಿ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ. ಹೀಗಾಗಿ ಇಲ್ಲಿನ ಠಾಣೆಯಲ್ಲಿ ಹೆಚ್ಚಿನ ಸಮಸ್ಯೆಗಳಿಲ್ಲ. ಸಿಬ್ಬಂದಿ ಕೊರತೆಯ ಬಗ್ಗೆ ರಾಜ್ಯ ಮಟ್ಟದಲ್ಲಿ ಕ್ರಮ ಆಗಬೇಕಿದೆ. ಆದರೂ, ಸಮಸ್ಯೆ ಬಗೆಹರಿಸಲು ಮುಂದಾಗಲಾಗುವುದು ಎಂದರು.

ಈ ಸಂದರ್ಭದಲ್ಲಿ ಪ್ರೊಬೇಷನರಿ ಡಿವೈಎಸ್ಪಿ ಹಾಗೂ ಹರಿಹರ ಠಾಣೆಯ ಸಿಪಿಐ ಯಶವಂತ್ ಕುಮಾರ್, ಪಿಎಸ್‌ಐ ಪ್ರವೀಣ್ ಕುಮಾರ್, ಎ.ಎಸ್.ಐ ರಾಜಶೇಖರಯ್ಯ, ವಿಜಯಕುಮಾರ್, ಮಲ್ಲೇಶಪ್ಪ ಸಿಬ್ಬಂದಿಗಳಾದ ರವಿಕುಮಾರ್, ಮಂಜುನಾಥ್, ದೇವರಾಜ್, ಮಂಜುನಾಥ್ ಕ್ಯಾತಪ್ಪನವರ್ ಕರಿಯಪ್ಪ, ಸಿದ್ದರಾಜ್, ತಿಪ್ಪಣ್ಣ ಇತರರು ಹಾಜರಿದ್ದರು.

# ಭಾರತದಿಂದ 92 ದಶಲಕ್ಷ ಮೊಟ್ಟೆ ಆಮದಿಗೆ ಶ್ರೀಲಂಕಾ ನಿರ್ಧಾರ

ಕೊಲಂಬೊ, ಆ. 29 – ಬೆಲೆ ನಿಯಂತ್ರಣಕ್ಕಾಗಿ ಭಾರತದಿಂದ 92.1 ದಶಲಕ್ಷ ಮೊಟ್ಟೆಗಳ ಆಮದಿಗೆ ಶ್ರೀಲಂಕ ನಿರ್ಧರಿಸಿದೆ ಎಂದು ಲಂಕಾ ಸಂಪುಟದ ವಕ್ತಾರ ಬಂಡುಲ ಗುಣವರ್ಧನ ಹೇಳಿದ್ದಾರೆ.

ಲಂಕಾದಲ್ಲಿ ಮೊಟ್ಟೆಗಳ ಕೊರತೆಯಾಗಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಬೆಲೆ ಏರಿಳಿತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತದಿಂದ ಮೊಟ್ಟೆ ಆಮದಿಗೆ ನಿರ್ಧರಿಸಲಾಗಿದೆ.

ಕಳೆದ ಮಾರ್ಚ್ ತಿಂಗಳಿನಿಂದಲೂ ಮೊಟ್ಟೆಗಾಗಿ ಶ್ರೀಲಂಕಾ ಭಾರತವನ್ನು ಅವಲಂಬಿಸಿದೆ. ಮಾರ್ಚ್ ತಿಂಗಳಲ್ಲಿ 2 ದಶಲಕ್ಷ ಮೊಟ್ಟೆ ಆಮದು ಮಾಡಿಕೊಳ್ಳಲಾಗಿತ್ತು.

# ಚಕ್ರವರ್ತಿ ಸೂಲಿಬೆಲೆ ವಿರುದ್ಧ ಎಫ್‌ಐಆರ್


ಶಿವಮೊಗ್ಗ, ಆ. 29 – ಚಿಂತಕ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಕೆ.ಪಿ.ಸಿ.ಸಿ. ಸಾಮಾಜಿಕ ಮಾಧ್ಯಮದ ಉಪಾಧ್ಯಕ್ಷೆ ಸೌಗಂಧಿಕಾ ರಘುನಾಥ್ ಎಫ್.ಐ.ಆರ್. ದಾಖಲಿಸಿದ್ದಾರೆ.

ಚಂದ್ರಯಾನ-3 ಯಶಸ್ವಿಯಾ ಗಲಿ ಎಂದು ಫೇಸ್‌ಬುಕ್ ನಲ್ಲಿ ದೇವರಿಗೆ ಕೈ ಮುಗಿದು ಫೋಟೋ ಹಾಕುವಂತೆ ಸೂಲಿಬೆಲೆ ಕರೆ ನೀಡಿದ್ದರು.

ಈ ಪೋಸ್ಟ್‌ಗೆ ಪ್ರತಿಕ್ರಿಯಿಸಿದ್ದ ಸೌಗಂಧಿಕ, ದೇವರ ಪೂಜೆಗಿಂತ ವಿಜ್ಞಾನಿಗಳ ಶ್ರಮ ಯಶಸ್ವಿಯಾಗ ಲೆಂದು ಪ್ರಾರ್ಥಿಸೋಣ ಎಂದಿದ್ದರು.

ಇದಕ್ಕೆ ಮರು ಪ್ರತಿಕ್ರಿಯಿಸಿದ್ದ ಸೂಲಿಬೆಲೆ, 'ಉರಿ ಏಕೆ' ಎಂಬರ್ಥ ಬರುವ ಹೇಳಿಕೆ ನೀಡಿದ್ದು, ನಂತರ ಆ ಪೋಸ್ಟ್ ಡಿಲೀಟ್ ಮಾಡಿದ್ದಾರೆ. ಡಿಲೀಟ್ ಮಾಡಿದ ಪೋಸ್ಟ್ ಅನ್ನು ಬೇರೆ ಖಾತೆಗಳ ಮೂಲಕ ಜಾಲತಾಣಗಳಲ್ಲಿ ಹರಡಲಾಗಿದೆ ಎಂದು ಸೌಗಂಧಿಕ ದೂರಿದ್ದಾರೆ.


## ತೃತೀಯ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಪ್ರಿಯದರ್ಶಿನಿ ಶ್ರೇಣಿಕ್ ಜೈನ್**

ನಿಧನ : 30-8-2020


ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಶ್ರೇಣಿಕ್ ಎ. ಜೈನ್, ಮಗ : ಮಿತಾಂಶ್ ಎಸ್. ಜೈನ್

ಅತ್ತೆ-ಮಾವ : ಷಾ ಅಶೋಕ್‌ಕುಮಾರ್ ಬಾಬುಲಾಲ್‌ಜೀ ಮತ್ತು ಶ್ರೀಮತಿ ರತ್ನದೇವಿ ಅಶೋಕ್‌ಕುಮಾರ್‌ಜೀ ಹಾಗೂ ಕುಟುಂಬ ವರ್ಗದವರು



## 3rd Death Anniversary



*In the loving memory of*

**Smt. Jayasheela Malimath**


[ 01.06.1958 – 30.08.2020 ]

Time flies fast. Life goes on at its own pace.
But some memories can never be forgotten
or erased from the mind of the dearest ones.
You will always remain in our thoughts.
Rest in Peace, my dear Mother.

Your Loving Daughter
**Shilpa Malimath**



## ತೊಗಟವೀರ ಸಮಾಜದ ಶ್ರೀ ಚೌಡೇಶ್ವರಿ ಅಮ್ಮನವರ ಪಲ್ಲಕ್ಕಿ - ಜ್ಯೋತಿ ಉತ್ಸವ





ಶ್ರೀ ದಿವ್ಯ ಜ್ಞಾನಾನಂದ ಸ್ವಾಮೀಜಿ



ಚಿತ್ರದುರ್ಗ ತಾಲ್ಲೂಕು ಚಿಕ್ಕಗೊಂಡನಹಳ್ಳಿಯಲ್ಲಿ ದಿನಾಂಕ 31.08.2023ರ ಗುರುವಾರ ನಡೆಯಲಿರುವ

ತೊಗಟವೀರ ಸಮಾಜದ ಕಟ್ಟೆಮನೆ ವರವೀರ ಶ್ರೀ ಚೌಡೇಶ್ವರಿ ಅಮ್ಮನವರ ಶ್ರಾವಣ ಮಾಸದ 28ನೇ ವರ್ಷದ ಪಲ್ಲಕ್ಕಿ ಉತ್ಸವ ಹಾಗೂ ಜ್ಯೋತಿ ಉತ್ಸವಕ್ಕೆ

ಆಗಮಿಸುತ್ತಿರುವ ಸಮಸ್ತ ಕುಲಬಾಂಧವರಿಗೂ, ಸರ್ವ ಭಕ್ತಾದಿಗಳಿಗೂ ಆದರದ ಸುಸ್ವಾಗತ.

ಶುಭ ಕೋರುವವರು

ಅಧ್ಯಕ್ಷರು ಹಾಗೂ ಕಾರ್ಯಕಾರಿ ಟ್ರಸ್ಟ್ ನಿರ್ದೇಶಕರುಗಳು,
ಶ್ರೀ ತೊಗಟವೀರ ಸಮಾಜದ ಕಟ್ಟೆಮನೆ ಟ್ರಸ್ಟ್ (ರಿ)
ಹಾಗೂ ಕುಲಬಾಂಧವರು,
ಚಿಕ್ಕಗೊಂಡನಹಳ್ಳಿ, ಚಿತ್ರದುರ್ಗ ತಾಲ್ಲೂಕು.




## Avinash Investments & Portfolio Management (NISM, NCFM)

STOCK MARKET COURSES



ತುಂಬಾ ಸರಳವಾಗಿ ಹಾಗೂ ಸುಲಭವಾಗಿ ಸ್ಟಾಕ್ ಮಾರ್ಕೆಟ್ (ಷೇರು ಮಾರುಕಟ್ಟೆ) ಅನ್ನು ಕನ್ನಡದಲ್ಲಿ ಕಲಿಯಿರಿ. ಪ್ರತಿದಿನ ಸ್ಟಾಕ್ ಮಾರ್ಕೆಟ್‌ನಲ್ಲಿ ನಿರಂತರವಾಗಿ 2000 ರೂ. ದಿಂದ 3000 ರೂ. ಗಳಿಸಬಹುದು ಹೇಗೆ ಎಂಬುದನ್ನು ನಮ್ಮ ಕೋರ್ಸ್‌ನಲ್ಲಿ ತಿಳಿಯಿರಿ.

- ಕಡಿಮೆ Capital ನಿಂದ ಲಾಭಗಳಿಸುವ ವಿಧಾನ
- Basic ನಿಂದ Advance ವರೆಗೆ Face to Face Training.
- ಎಲ್ಲಾ Training ಗಳು Practically ನಡೆಯುತ್ತವೆ.
- Risk Management Lession's ಒಳಗೊಂಡಿರುತ್ತದೆ.
- ಪ್ರತಿಯೊಬ್ಬರಿಗೂ ಪ್ರತ್ಯೇಕ Attention ನೀಡಲಾಗುವುದು.
- ಉತ್ತಮ ಸ್ಟಾಕ್ Selection ಅನ್ನು ಹೇಳಿ ಕೊಡಲಾಗುವುದು.



Arunodaya Complex, 1st Floor, Near Hemavathi Hostel, BIET Main Road, Davanagere.

08192-453446



